ಬೆಲೆ ರೂ.2.50
D.O.P - 15th of every month at Udupi Sorting Office

**Smt. Nagaveni Ullas**
Proprietor
Mobile : 9741626190
E-mail : rao.ullas@yahoo.co.in

**RAMDEV ENTERPRISES**
"Ramdev", Opp. Balaganapathi Temple, Padubidri-574111, Udupi Dist.

Authorised Distributor For :
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists

# ಶ್ರೀ ಶಾರದಾ

ಮಾಸಪತ್ರಿಕೆ – 15 ಮೇ 2015

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-15 ಸಂಚಿಕೆ-5 ಪುಟಗಳು-8 Registered Under No.UDP/1260/2015-2017 Licenced to Post without Prepayment WPP No. SK/WPP/UDP/81/15-17

# ಶ್ರೀ ಶಂಕರ ಜಯಂತಿ ಆಚರಣೆ....



**ಆದಿಗುರು ಶ್ರೀ ಶಂಕರಾಚಾರ್ಯರ ಜಯಂತ್ಯುತ್ಸವವು ಪ್ರತೀ ವರ್ಷ ಮೇ ತಿಂಗಳಲ್ಲಿ ಆಚರಿಸಲ್ಪಡುತ್ತಿದ್ದು, ಅದ್ವೈತ ತತ್ತ್ವ ಪ್ರಸಾರದಲ್ಲಿ ನಿರತರಾಗಿರುವ ಶ್ರೀ ಶಂಕರರ ಅನುಯಾಯಿಗಳಿಂದ ಅಲ್ಲಲ್ಲಿ ಶ್ರೀ ಶಂಕರ ಜಯಂತ್ಯುತ್ಸವವು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು.**

## ಉಡುಪಿಯಲ್ಲಿ ಜ್ಞಾನ ಭಾರತಿ (ರಿ.) (ವೇದಾಂತ ಜೀವನ ತತ್ತ್ವದರ್ಶನ ವೇದಿಕೆ) ಮತ್ತು ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ ವತಿಯಿಂದ

ಶ್ರೀ ಶಾರದಾ ಮಂಟಪ ಕುಂಜಿಬೆಟ್ಟು ಉಡುಪಿಯಲ್ಲಿ ತಾ.22–04–2015 ಬುಧವಾರ ಬೆಳಿಗ್ಗೆ 9.30 ರಿಂದ ಶಂಕರ ಜಯಂತಿ ಅಂಗವಾಗಿ ಶ್ರೀ ಶಾರದಾ ದೇವಸ್ಥಾನದಲ್ಲಿ ಶಂಕರಾಚಾರ್ಯ ವಿರಚಿತ ಸೌಂದರ್ಯ ಲಹರಿ ಅಖಂಡ ಪಾರಾಯಣ ನಡೆಯಿತು. ಸಂಜೆ ಶಂಕರಾಚಾರ್ಯ ಭಾವಚಿತ್ರದೊಂದಿಗೆ ಪರಿಕ್ರಮಣವೂ ನೆರವೇರಿತು.

ಹಾಗೆಯೇ ತಾ.23–04–2015 ಗುರುವಾರ 10.30ರಿಂದ ಶಂಕರಾಚಾರ್ಯ ಪೂಜೆ, ಸ್ತೋತ್ರಪಠಣ ನಂತರ ಸೌಂದರ್ಯಲಹರಿ ಪಾರಾಯಣದ ಸಮಾಪ್ತಿ ನೆರವೇರಿತು. 11.30ಕ್ಕೆ ಪ್ರೊ। ವಾಗೀಶ ಎಸ್. ಶಾಸ್ತ್ರಿಯವರಿಂದ "ಆದಿಶಂಕರರಿಂದ ಭಕ್ತಿ ಮಾರ್ಗ ಪ್ರೇರಣೆ" ಎಂಬ ವಿಷಯದ ಬಗ್ಗೆ ಪ್ರವಚನ ನಡೆಯಿತು. ಜ್ಞಾನಭಾರತಿಯ ಅಧ್ಯಕ್ಷರಾದ ಶ್ರೀ ಪುಪ್ರುಲ್ಲಚಂದ್ರ ರಾವ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಡಾ। ಎಸ್.ಎಲ್. ಕಾರ್ಣಿಕರು ಕಾರ್ಯಕ್ರಮ ನಿರೂಪಣೆ ಮಾಡಿ ಧನ್ಯವಾದವಿತ್ತರು. ಕೊನೆಯಲ್ಲಿ ಆಚಾರ್ಯ ಪೂಜೆಯ ನಂತರ ಪ್ರಸಾದ ವಿತರಣೆ ನೆರವೇರಿತು. ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಬಾಂಧವರು ಆಗಮಿಸಿ ಕೃತಾರ್ಥರಾದರು.

## ಕೋಟೆಕಾರು ಶೃಂಗೇರಿ ಮಠದಲ್ಲಿ....

ಕೋಟೆಕಾರು ಶೃಂಗೇರಿ ಮಠದಲ್ಲಿ ದಿನಾಂಕ 21–04–2015ರಿಂದ 23–04–2015ರವರೆಗೆ ಶಂಕರ ಜಯಂತ್ಯುತ್ಸವವನ್ನು ಆಚರಿಸಲಾಯಿತು. ತಾ.21ರಂದು ಸಂಜೆ ಕೋಟೆಕಾರು ಬ್ರಾಹ್ಮಣ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಶಂಕರನಾರಾಯಣ ಭಟ್‌ರವರ ಅಧ್ಯಕ್ಷತೆಯಲ್ಲಿ, ದೇರಳಕಟ್ಟೆ ವಿದ್ಯಾರತ್ನ ಆಂಗ್ಲ ಮಾಧ್ಯಮ ಶಾಲೆಯ ಆಡಳಿತ ನಿರ್ದೇಶಕ ಶ್ರೀ ಕೆ ರವೀಂದ್ರ ಶೆಟ್ಟಿ ಉಳಿದೊಟ್ಟು ಇವರ ಉಪಸ್ಥಿತಿಯಲ್ಲಿ ಮಂಗಳೂರಿನ ಎಸ್‌ಡಿಎಮ್ ಕಾಲೇಜಿನ ಪ್ರಾಧ್ಯಾಪಕರಾದ ಶ್ರೀ ಸಾಯಿನಾಥ್ ಮಲ್ಲಿಗೆಮಾಡು ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಉದ್ಘಾಟಿಸಿದರು. ಮಂಗಳೂರಿನ ಹಿರಿಯ ನ್ಯಾಯವಾದಿಗಳಾದ ಶ್ರೀ ಶಂನಾಡಿಗರವರು ಶ್ರೀ ಶಂಕರರ ಕುರಿತು ಉಪನ್ಯಾಸವನ್ನು ನೀಡಿದರು.

ತಾ.22ರಂದು ಡಾ। ಎಂ.ಪ್ರಭಾಕರ ಜೋಷಿಯವರೂ ತಾ.23ರಂದು ಡಾ। ವಾಗೀಶ್ವರೀ ಶಿವರಾಮ್‌ರವರೂ ಉಪನ್ಯಾಸ ನೀಡಿದರು. ಪ್ರತಿದಿನ ವಿವಿಧ ಧಾರ್ಮಿಕ ಕಾರ್ಯಕ್ರಮಗಳ ಜೊತೆ ಆಚಾರ್ಯ ಪೂಜೆ ಮತ್ತು ಪ್ರಸಾದ ವಿತರಣೆ ಹಾಗೂ ಕರ್ನಾಟಕ ಸಂಗೀತ ಕಾರ್ಯಕ್ರಮಗಳೂ ನೆರವೇರಿತು. ತಾ.23ರಂದು ಶ್ರೀ ರುದ್ರಯಾಗದ ಪೂರ್ಣಾಹುತಿ ನಡೆದು, ಅನ್ನ ಸಂತರ್ಪಣೆಯೂ ರಾತ್ರಿ ವಸಂತೋತ್ಸವವೂ ನೆರವೇರಿತು.

## ಮಂಗಳೂರಿನ ಕಾಳಿಕಾಂಬಾ ವಿನಾಯಕ ದೇವಸ್ಥಾನದಲ್ಲಿ....

ಶ್ರೀ ಶಂಕರ ಪ್ರತಿಷ್ಠಾನ, ಶ್ರೀ ಶೃಂಗೇರಿ ಶಂಕರ ಮಠ, ಕೋಟೆಕಾರು, ಮಂಗಳೂರು ಮತ್ತು ಶ್ರೀ ಕಾಳಿಕಾಂಬಾ ವಿನಾಯಕ ದೇವಸ್ಥಾನ, ಮಂಗಳೂರು ಇವರ ಕೂಡುವಿಕೆಯಿಂದ ದಿನಾಂಕ 19–04–2015ರಿಂದ ಶ್ರೀ ಶಂಕರ ಜಯಂತಿ ಉತ್ಸವವನ್ನು ಜಿಲ್ಲೆಯ ವಿವಿಧ ಕೇಂದ್ರಗಳಲ್ಲಿ ಆಚರಿಸಿ ದಿನಾಂಕ 04–05–2015ರಂದು ಮಂಗಳೂರಿನ ರಥಬೀದಿಯಲ್ಲಿರುವ ಶ್ರೀ ಕಾಳಿಕಾಂಬಾ ವಿನಾಯಕ ದೇವಸ್ಥಾನದಲ್ಲಿ ಸಮಾರೋಪ ಸಮಾರಂಭವನ್ನು ನೆರವೇರಿಸಲಾಯತು.

ನಿಟ್ಟೆ ವಿಶ್ವವಿದ್ಯಾಲಯದ ಕುಲಪತಿಗಳಾದ ಶ್ರೀ ನಿಟ್ಟೆ ವಿನಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಶ್ರೀ ದೇವಳದ ಆಡಳಿತ ಮುಕ್ತೇಸರರಾದ ಶ್ರೀ ಲೋಕೇಶ್ ಆಚಾರ್ಯ, ಧರ್ಮದರ್ಶಿ ಶ್ರೀ ಹರಿಕೃಷ್ಣ ಪುನರೂರು, ಕರ್ನಾಟಕ ಬ್ಯಾಂಕ್‌ನ ಜನರಲ್ ಮೆನೇಜರ್ ಶ್ರೀ ಬಿ ಚಂದ್ರಶೇಖರ ರಾವ್, ಮಂಗಳೂರಿನ ಎಸ್ ಡಿ ಎಮ್ ಬ್ಯುಸಿನೆಸ್ ಮೆನೇಜ್‌ಮೆಂಟ್ ಕಾಲೇಜಿನ ನಿರ್ದೇಶಕರಾದ ಶ್ರೀ ದೇವರಾಜ್ ಮೊದಲಾದವರ ಉಪಸ್ಥಿತಿಯಲ್ಲಿ ವೇ. ಬ್ರಹ್ಮಶ್ರೀ ಹಿರಣ್ಯ ವೆಂಕಟೇಶ್ವರ ಭಟ್ ಸಮಾರೋಪ ಭಾಷಣ ಮಾಡಿದರು. ಕಟಪಾಡಿ ಆನೆಗುಂದಿ ಮಹಾಸಂಸ್ಥಾನದ ಪೀಠಾಧೀಶ್ವರಾದ ಶ್ರೀ ಶ್ರೀ ಕಾಳ ಹಸ್ತೇಂದ್ರ ಸರಸ್ವತೀ ಮಹಾ ಸ್ವಾಮಿಗಳು ಉಪಸ್ಥಿತರಿದ್ದು, ಆಶೀರ್ವಚನ ನೀಡಿದರು.

ಅಂದು ಮಧ್ಯಾಹ್ನ ಸಾಂಸ್ಕೃತಿಕ ಕಾರ್ಯಕ್ರಮವಾಗಿ ಜಿಲ್ಲೆಯ ಪ್ರಸಿದ್ಧ ಕಲಾವಿದರ ಕೂಡುವಿಕೆಯಿಂದ 'ಭೀಷ್ಮಾರ್ಜುನ' ತಾಳಮದ್ದಳೆ ಕಾರ್ಯಕ್ರಮವೂ ನೆರವೇರಿತು.

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ....

ಮಂಗಳೂರಿನ ಸ್ಥಾನಿಕ ಬ್ರಾಹ್ಮಣ ಸಮಾಜ ಬಾಂಧವರು ತಾ. 25–04–2015ನೇ ಶನಿವಾರ ಶ್ರೀ ಸುಬ್ರಹ್ಮಣ್ಯ ಸಭಾದ ಕುಡ್ಪಿ ಭುಜಂಗರಾವ್ ಸ್ಮಾರಕ ಭವನದಲ್ಲಿ ಆದಿ ಗುರು ಶ್ರೀ ಶಂಕರಚಾರ್ಯರ ಜಯಂತಿಯನ್ನು ಆಚರಿಸಿದರು.

ಸಭಾದ ಸದಸ್ಯರು ಸಾಮೂಹಿಕವಾಗಿ ಲಲಿತ ಸಹಸ್ರನಾಮ, ವಿಷ್ಣು ಸಹಸ್ರನಾಮ ಮತ್ತು ಶ್ರೀ ಶಂಕರಾಚಾರ್ಯ ಅಷ್ಟೋತ್ತರಗಳನ್ನು ಪಠಿಸುವುದರೊಂದಿಗೆ ಸಭೆಗೆ ಧಾರ್ಮಿಕ ರಂಗನ್ನು ನೀಡಿದರು. ಸಭಾದ ಉಪಾಧ್ಯಕ್ಷರಾದ ಡಾ. ಎ. ಪಿ. ಕೃಷ್ಣ ಸುಮನ್ ದಂಪತಿಗಳು ಶ್ರೀ ದುರ್ಗಾ ನಮಸ್ಕಾರ ಪೂಜೆಯ ಕರ್ತೃಗಳಾಗಿ ಸಂಕಲ್ಪ ಮಾಡಿ, ಪವಿತ್ರ ಪಾಣಿಗಳಾಗಿ ಪೂಜೆಗೆ ಚಾಲನೆ ನೀಡಿದರು.

ಮಂಗಳೂರು ವಿಮಾನ ನಿಲ್ದಾಣದ ಮಾಜಿ ನಿರ್ದೇಶಕರಾದ ಶ್ರೀ. ಎಂ. ಆರ್ ವಾಸುದೇವ ರವರು ಆದಿಗುರು ಶ್ರೀ ಶಂಕರಾಚಾರ್ಯರ ಕುರಿತು ಧಾರ್ಮಿಕ ಉಪನ್ಯಾಸವನ್ನು ನೀಡಿದರು. ವೇದ, ಉಪನಿಷತ್‌ಗಳ ಪ್ರಚಾರಕ್ಕಾಗಿ ಶಂಕರಾಚಾರ್ಯರು ಮಾಡಿದ ಕಾರ್ಯಗಳು, ಎಲ್ಲರು ಒಂದೇ ಎನ್ನುವ ಅದ್ವತ ಸಿದ್ಧಾಂತದ ಅರ್ಥ ವೇದಗಳ ಪ್ರಚಾರಕ್ಕಾಗಿ ಅವರು ಸ್ಥಾಪಿಸಿದ ನಾಲ್ಕು ಆಮ್ನಾಯ ಪೀಠಗಳು ಇತ್ಯಾದಿಗಳ ಬಗ್ಗೆ ಉಪಯುಕ್ತವಾದ ಮಾಹಿತಿಗಳನ್ನು ನೀಡಿದರು, ಶೃಂಗೇರಿ ಜಗದ್ಗುರು ಪೀಠದಿಂದ ಕೊಡಲ್ಪಟ್ಟ ಸ್ಮರಣಿಕೆಯನ್ನು ನೀಡಿ ಶಾಲು ಹೊದಿಸಿ, ಅವರನ್ನು ಸನ್ಮಾನಿಸಲಾಯಿತು. ಯುವ ಪ್ರತಿಭೆಯಾದ ಕುಮಾರಿ ಸೌಂದರ್ಯಲಕ್ಷ್ಮಿಯು ಶ್ರೀ ಶಂಕರಾಚಾರ್ಯ ರಚಿತವಾದ ಮೀನಾಕ್ಷಿಸ್ತೋತ್ರವನ್ನು ಸುಶ್ರಾವ್ಯ ಕಂಠದಿಂದ ಹಾಡಿದಳು.

ಶ್ರೀ ಸುಬ್ರಹ್ಮಣ್ಯ ಸಭಾದ ವಿದ್ಯಾನಿಧಿಗೆ ದೇಣಿಗೆಯಾಗಿ ರೂ. 1.75 ಲಕ್ಷವನ್ನು ಉದಾರವಾಗಿ ನೀಡಿದ ಬೆಂಗಳೂರಿನಲ್ಲಿರುವ ಶ್ರೀ ಪಿ. ಎಸ್. ರಾವ್ ಶೀಮಂತೂರು ಇವರ ಮಾತಾ ಪಿತರ ಭಾವಚಿತ್ರವನ್ನು ಅನಾವರಣ ಮಾಡಲಾಯಿತು. ಸಭಾದ ಅಧ್ಯಕ್ಷರಾದ ಶ್ರೀ ಸಿ.ಎಸ್. ರಾಯರು ಮತ್ತು ಕಾರ್ಯದರ್ಶಿಗಳಾದ ಕರುಣ್ ಬೆಳ್ಳೆಯವರು ಶ್ರೀ ಪಿ. ಎಸ್. ರಾವ್ ಮತ್ತು ಅವರ ಕುಟುಂಬಸ್ತರನ್ನು ಸನ್ಮಾನಿಸಿದರು ಮತ್ತು ಇಂತಹ ಸಾಮಾಜಿಕ ಕಳಕಳಿಯ ಪವಿತ್ರ ಕೆಲಸಗಳಲ್ಲಿ ಇನ್ನೂ ಹೆಚ್ಚು ಜನರು ಮುಂದೆ ಬರಬೇಕೆಂದು ವಿನಂತಿಸಿದರು.

ಶ್ರೀ ಸುಬ್ರಹ್ಮಣ್ಯ ಸಭಾದ ಭಜನಾ ಮಂಡಳಿಯ ಸದಸ್ಯರು ಭಕ್ತಿ ಪೂರಕವಾಗಿ ಭಜನಾ ಕಾರ್ಯಕ್ರಮವನ್ನು ನಡೆಸಿಕೊಟ್ಟರು ಶ್ರೀ ಪಿ. ಶ್ರೀಕಾಂತ್ ರಾವ್ ಹಾಗೂ ಶ್ರೀ ಸುರೇಶ್ ಕಡಬ ಕಾರ್ಯಕ್ರಮ ನಿರ್ವಹಿಸಿದರು. ಶ್ರೀ ದುರ್ಗಾನಮಸ್ಕಾರ ಪೂಜೆಯ ಮಹಾ ಮಂಗಳಾರತಿಯು ಸಂಪನ್ನಗೊಂಡು ಪ್ರಸಾದ ವಿತರಣೆಯಾದ ಬಳಿಕ ಪ್ರಸಾದ ಭೋಜನದೊಂದಿಗೆ 2015ರ ಶಂಕರ ಜಯಂತಿ ಕಾರ್ಯಕ್ರಮವು ಮುಕ್ತಾಯವಾಯಿತು.

(4ನೇ ಪುಟಕ್ಕೆ...)



ಸಂಪಾದಕೀಯ ಲೇಖನ....

# ರಾಜ್ಯ ಸರಕಾರದ ಜಾತಿಗಣತಿ-ಮಾಹಿತಿ

ಕಳೆದ ಎರಡು ತಿಂಗಳ "ಶ್ರೀ ಶಾರದಾ" ಪತ್ರಿಕೆಯಲ್ಲಿ ಸರಕಾರದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಬಗ್ಗೆ ನೀಡಿದ ಮಾಹಿತಿಯಂತೆ ಸಮಾಜ ಬಾಂಧವರು ಗಣತಿದಾರರಿಗೆ ತಮ್ಮ ಮನೆಯ, ಕುಟುಂಬದ ಮಾಹಿತಿಯನ್ನು ನೀಡಿರುತ್ತೀರಿ.

ಈಗ ನಾವು ನೀಡಿದ ಮಾಹಿತಿಯು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಕೈಯಲ್ಲಿದೆ. ಈ ಮಾಹಿತಿಯನ್ನು ಪರಿಶೀಲಿಸಿದ ಆಯೋಗವು ನಮ್ಮ ಜಾತಿಯನ್ನು ಯಾವ ಪ್ರವರ್ಗಕ್ಕೆ ಸೇರಿಸಬೇಕೆಂದು ಪರಿಶೀಲಿಸಿ ಸರಕಾರಕ್ಕೆ ಶಿಫಾರಸ್ಸು ಮಾಡುತ್ತದೆ. ಈ ಕೆಲಸಕ್ಕೆ ಒಂದೆರಡು ತಿಂಗಳ ಕಾಲಾವಕಾಶವಿದೆ. ಅದರೊಳಗೆ ನಮ್ಮ ಸಮಾಜ ಬಾಂಧವರು ಮತ್ತು ನಮ್ಮ ಸಂಘಟನೆಗಳು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಿಗೆ ವೈಯಕ್ತಿಕ ಅಥವಾ ಸಾಮೂಹಿಕ ಅಲ್ಲದೆ ಎಲ್ಲಾ ಸಂಘಟನೆಗಳ ಮೂಲಕವೂ ಪತ್ರ ಬರೆದು ವಿನಂತಿಸಿಕೊಳ್ಳಬೇಕಾದ ಅನಿವಾರ್ಯತೆಯೂ ಇದೆ. ಆದ್ದರಿಂದ ಎಲ್ಲರೂ ಕೆಳಗೆ ಕೊಟ್ಟಂತೆ ಆಯೋಗದ ಅಧ್ಯಕ್ಷರಿಗೆ ಪತ್ರ ಬರೆಯುವ ಆಂದೋಲನವೊಂದನ್ನು ಮಾಡಬೇಕೆಂದು ವಿನಂತಿ.

**(ಪತ್ರದ ಮಾದರಿ)**

ರಿಗೆ,

**ಅಧ್ಯಕ್ಷರು**
ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ
ನ.16-ಡಿ, ಡಿ.ದೇವರಾಜ ಅರಸು ಭವನ, 2ನೇ ಮಹಡಿ,
ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತ ನಗರ, ಬೆಂಗಳೂರು-560052
**ಇ-ಮೈಲ್ : kscbcb@gmail.com**

ರಿಂದ,

**ಅಧ್ಯಕ್ಷರು**
(ಸಂಘಟನೆಯ ಅಥವಾ ವೈಯಕ್ತಿಕ ಹೆಸರು ಮತ್ತು ವಿಳಾಸ)

ಮಾನ್ಯರೇ,

**ವಿಷಯ: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಆಧಾರದಂತೆ ಸ್ಥಾನಿಕ ಬ್ರಾಹ್ಮಣ ಸಮುದಾಯವನ್ನು ಹಿಂದಿನಂತೆಯೇ ಪ್ರವರ್ಗ-॥(ಎ)ಗೆ ಸೇರಿಸುವಂತೆ ಮನವಿ**


★★★ ★★★

ಸ್ಥಾನಿಕ ಬ್ರಾಹ್ಮಣ ಜಾತಿಯು (ಸರಕಾರವು ಪ್ರಕಟಿಸಿದ ಜಾತಿ ಪಟ್ಟಿಯಲ್ಲಿದ್ದಂತೆ ಸಂಖ್ಯೆ ಎ1177) ತಮಗೆ ಸಮೀಕ್ಷೆಯಲ್ಲಿ ಸಿಕ್ಕಿದ ಅಂಕಿ ಅಂಶಗಳ ಪ್ರಕಾರ ಅಲ್ಪಸಂಖ್ಯಾತ ಜಾತಿಯಾಗಿರುತ್ತದೆ ಹಾಗೂ ಎಲ್ಲಾ ಮೂಲಗಳಿಂದಲೂ ಪರಿಶೀಲಿಸಿದಾಗ ಸರಕಾರದ ಮೀಸಲಾತಿ ಸೌಲಭ್ಯ ಪಡೆಯಲು ಅರ್ಹ ಜಾತಿಯಾಗಿರುತ್ತದೆ. ಅಲ್ಲದೆ ಸರಕಾರವು ಹಿಂದೆ ಈ ಸ್ಥಾನಿಕ ಬ್ರಾಹ್ಮಣ ಜಾತಿಯನ್ನು ಪ್ರವರ್ಗ ॥(ಎ) ಪಟ್ಟಿಯಲ್ಲಿಯೇ ಸೇರಿಸಿದ್ದು, ಈ ಸಮೀಕ್ಷೆಗಿಂತಲೂ ಮೊದಲ ಕಟ್ಟಕಡೆಯ ಸರ್ಕಾರಿ ಆದೇಶ ಸಕಇ 225 ಬಿಸಿಎ 2000, ಬೆಂಗಳೂರು, ದಿನಾಂಕ 30ನೇ ಮಾರ್ಚ್ 2002ರಂತೆ ಪ್ರವರ್ಗ ॥(ಎ) ಪಟ್ಟಿಯಲ್ಲಿ ಕ್ರಮಸಂಖ್ಯೆ 100ರಲ್ಲಿ ಗುರುತಿಸಿಕೊಂಡಿದೆ. ಆದ್ದರಿಂದ "ಸ್ಥಾನಿಕ ಬ್ರಾಹ್ಮಣ"(ಸಂಖ್ಯೆ ಎ1177) ಮತ್ತು ಪರ್ಯಾಯ ಹೆಸರು "ಸ್ಥಾನಿಕ" (ಸಂಖ್ಯೆ ಎ1176) ಇವುಗಳನ್ನು ಪ್ರವರ್ಗ॥(ಎ) ಗೆ ಸೇರಿಸುವಂತೆ ಸರಕಾರಕ್ಕೆ ಶಿಫಾರಸ್ಸು ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇವೆ.

ಇತೀ ವಂದನೆಗಳೊಂದಿಗೆ,

ದಿನಾಂಕ: ......................  ತಮ್ಮ ವಿಶ್ವಾಸಿ
ಸ್ಥಳ : ......................  (ಸಹಿ)

# ಕನ್ನಡ ಕವಿಕಾವ್ಯ ಪರಿಚಯ-೧೧ : ಷಟ್ಪದಿ ಕವಿ ರಾಘವಾಂಕ-5



**- ಹರಿದಾಸ ಮ.ನಾ.ಹೆಬ್ಬಾರ**
**ಎಂ.ಎ., ಬಿ.ಎಡ್.**

**(ಕಳೆದ ಸಂಚಿಕೆಯಿಂದ)**

## ಸೋಮನಾಥ ಚರಿತೆ :

ಇತ್ತ ಕೊಪ್ಪಣದ ಕಡೆಯಿಂದ ಕೆಲವು ಮಲಧಾರಿಗಳಾದ ಶ್ರಮಣರು ಬರಲು ಅವರನ್ನು ಪಾರಿಸ ಶೆಟ್ಟಿಯು ತಮ್ಮ ಮನೆಗೆ ಚರಿಗೆಗೆಂದು ಕರೆದುಕೊಂಡು ಬಂದನು. ಮನೆಯಲ್ಲಿ ಮಾಡಿದ್ದ ಅಡಿಗೆಯು ಮುಗಿದು ಹೋಗಿದ್ದುದರಿಂದ, ಅವನೂ ಅವನ ಹೆಂಡತಿಯೂ ತನ್ನ ಮಗಳು ಶಿವ ಭಕ್ತರಿಗೆಂದು ಮಾಡಿಟ್ಟಿದ್ದ ಅಡಿಗೆಯನ್ನು (ಅದಕ್ಕೆ ಬದಲಾಗಿ ಅಕ್ಕಿ ಕೊಡುತ್ತೇನೆಂದು ಹೇಳಿ) ಬಲವಂತವಾಗಿ ತಂದುಬಿಟ್ಟರು, ಶಿವಭಕ್ತರು ಬಂದಾಗ ಪದ್ಮಾವತಿಯು ತಿರುಗಿ ಅಡಿಗೆಯ ಪ್ರಯತ್ನ ಮಾಡಬೇಕಾಯಿತು. ಆದರೆ ಆಗಲೆ ಕತ್ತಲೆಯಾಗುತ್ತ ಬಂದದ್ದರಿಂದ ಅವರು ರಾತ್ರಿಯೂಟಕ್ಕೆ ಒಪ್ಪಲಿಲ್ಲ. ಆದ್ದರಿಂದ ಆದಯ್ಯನು ಅವರಿಗೆ ಹಣ್ಣು ಹಂಪಲುಗಳನ್ನು ತಂದುಕೊಟ್ಟು ಫಲಾಹಾರ ಮಾಡಿಸಿದನು.

ಈ ಅವಾಂತರದಿಂದ ಅವನಿಗೆ ಅಸಮಾಧಾನವಾಗಿ ಊಟ ಬೇಕಾಗಲಿಲ್ಲ. ಹೆಂಡತಿ ಅತ್ತೆ ಮಾವ ಎಷ್ಟೆಷ್ಟೋ ಸಮಾಧಾನ ಹೇಳಿದರೂ ಅವನು ಊಟಕ್ಕೆ ಏಳಲಿಲ್ಲ. ಕೊನೆಗೆ ಸೆಟ್ಟಿಗೆ ಸಿಟ್ಟು ಬಂದು 'ಇವನೇನು ತಮ್ಮ ದೇವರನ್ನು ತಂದು ನಮ್ಮ ದೊಡ್ಡ ಸುರಹೊನ್ನೆಯ ಬಸದಿಯಲ್ಲಿ ಪ್ರತಿಷ್ಠಿಸಿ ಜೈನಕುಲವನ್ನು ಹಾಳುಮಾಡಿದ ಹೊರತು ಊಟ ಮಾಡುವುದಿಲ್ಲವೇನೂ!' ಎಂದು ಮೂದಲಿಸಿದನು. ಈ ಮಾತು ಕೇಳಿ ಸಿಟ್ಟುಗೊಂಡು ಆದಯ್ಯನು ಒಂದು ತಿಂಗಳೊಳಗಾಗಿ ಸೋಮಯ್ಯನನ್ನು ತಂದಿಟ್ಟೇ ಊಟಮಾಡುತ್ತೇನೆಂದು ಹಟ ಕಟ್ಟಿಕೊಂಡು ತನ್ನ ಊರ ಕಡೆ ಹೊರಟನು. ಪದ್ಮಾವತಿಯೂ ತನ್ನ ಗಂಡನು ಹಿಂತಿರುಗಿ ಬರುವವರೆಗೆ ತನ್ನ ತಾಯಿತಂದೆಗಳನ್ನು ಮಾತಾಡಿಸುವುದಿಲ್ಲವೆಂದು ಹಟ ಹಿಡಿದಳು.

ಇತ್ತ ಆದಯ್ಯನು ಊರ ಕಡೆ ಹೊರಟು ಕಾಡಿನಲ್ಲಿ 'ಉರಿವುರಿವ ಬಿಸಿಲೊಳಗೆ ಬಳಲಿ ಬೆಂಡಾಗಿ' ಇಪ್ಪತ್ತೆಂಟು ದಿನದ ಮೇಲೆ ಸೋಮನಾಥನನ್ನು ಕಂಡನು. ಅವನು ಭಕ್ತನ ಮೇಲೆ ಕರುಣೆ ತೋರಿ ಆದಯ್ಯನನ್ನು ಪುಲಿಗೆರೆಯಲ್ಲಿ ಕರೆದುತಂದು ಬಿಟ್ಟು ತಾನು ಬಸದಿಯಲ್ಲಿ ಸೇರಿ ಬಾಗಿಲು ಹಾಕಿಕೊಂಡನು. ಮರುದಿನ ಬೆಳಿಗ್ಗೆ ಶ್ರಮಣರು ಯಾರು ಬಂದು ತೆಗೆದರೂ ಬಾಗಿಲು ಬರದು; ಹಾರೆ ಮಂಡಿಗೆಗಳೆಲ್ಲಾ ನಿರುಪಯೋಗವಾದುವು. ಪಟ್ಟದಾನೆಯಿಂದ ಕದವನ್ನು ತಳ್ಳಿಸಿದರೂ ಅದು ಅಲ್ಲಾಡಲಿಲ್ಲ. ಕೊನೆಗೆ ಆದಯ್ಯನು ಶಿವನನ್ನು ಸ್ತುತಿಸಲು ಬಾಗಿಲು ತೆರೆಯಿತು. ಆದರೆ ಒಳಗೆ ಅರುಹಮೂರ್ತಿಯೊಡೆದು ಶಿವಮೂರ್ತಿ ಮೂಡಿತು, ಇದನ್ನು ನೋಡಿ, ಪುಲಿಗೆರೆಯ ಜೈನರೆಲ್ಲರೂ ಚಂದ್ರಾದಿತ್ಯನನ್ನು ಮುಂದುಮಾಡಿಕೊಂಡು ಆದಯ್ಯನ ಮೇಲೆ ಬಿದ್ದರು. ಆದಯ್ಯನಿಗೆ ನಂದಿಯ ಸಹಾಯ ದೊರೆತು ಜೈನರೆಲ್ಲರೂ ಸೋತರು. ಚಂದ್ರಾದಿತ್ಯನು ಕಾಡಿಗೆ ಓಡಿ ಹೋದನು. ಅನಂತರ ಆದಯ್ಯನು ತನ್ನ ತಾಯಿತಂದೆ ಅತ್ತೆ-ಮಾವಂದಿರನ್ನು ಊರಲ್ಲಿ ಮುಖ್ಯರನ್ನಾಗಿ ಮಾಡಿ ನಿಲ್ಲಿಸಿ ತಾನು ಪದ್ಮಾವತಿಯೊಡನೆ ಸೋಮನಾಥನ ಬಲದ ಕಂಬದಲ್ಲಿ ಐಕ್ಯವಾದನು.

(ಮುಂದುವರಿಯುವುದು...)

**ಸಂಪಾದಕ ಮಂಡಳಿ**

ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ್ ರಾವ್
ಡಾ। ವೈ. ಸುದರ್ಶನ ರಾವ್
ಟಿ. ಸುರೇಶ್ ರಾವ್, ನಿಟ್ಟೂರು
ಟಿ. ವಿಶ್ವನಾಥ ಶಾನುಭಾಗ್, ವಿ.ಪಿ.ನಗರ
ಪ್ರಕಾಶ್ ರಾವ್ ಕೋಲ್ಪೆ, ಮಣಿಪಾಲ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯ ವಾಗಿರಬೇಕಾಗಿಲ್ಲ, ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ. -ಸಂಪಾದಕ ಮಂಡಳಿ

## ಯಾಕೆ ಬರಲಿಲ್ಲ..... ಕೃಷ್ಣ

ಅಂದು ಹೇಳಿದ್ದ ಕೃಷ್ಣ!
ಬರುತ್ತೇನೆ ಮತ್ತೆ... ಮತ್ತೆ...
ಕಾಯುತ್ತಿದ್ದಾರೆ ಗೋಪಿಯರು
ಅದೇ ವೃಂದಾವನದ ಕೊಳದ ಬಳಿ
ಅಲ್ಲಿ ನೀರಿಲ್ಲ... ಬರಿಯ ಬಿಸಿಯುಸಿರು ಮಾತ್ರ
ಕರೆದರೂ ಬರಲಿಲ್ಲ ಕೃಷ್ಣ.

ಯಾಕೆ ಬರಲಿಲ್ಲ ಕೃಷ್ಣ?
ಪ್ರತಿನಿತ್ಯ ನಡೆದಿದೆ 'ಭಾರತ ಯುದ್ಧ'
ಸಾಗುತ್ತಿವೆ ದನಕರುಗಳ ಸಾಲು ಗಲ್ಲುಗಂಬದತ್ತ
ಅಗೋ ಬಂದ ಬಲರಾಮ...
ಹಾಗೆಯೇ ಹೋದ ಭಯದಿಂದ.

ಕೃಷ್ಣ ಬರಲಿಲ್ಲऽऽऽऽ
ಯಾಕೆ ಬರಬೇಕು ಕೃಷ್ಣ?
ನೀರಿಲ್ಲ.... ನೀರಾಟವಿಲ್ಲ
ಕಾಳಿಂದಿ ಮಡುವಿಲ್ಲĝಯಮುನೆ ಕೆಸರಕೊಳ
ರಥದಲ್ಲಿ ದನಂಜಯನಿಲ್ಲ.....
ಯಾಕೋ ಸಾರಥಿ ಮಾತ್ರ.
ಎಲ್ಲೆಲ್ಲೂ ಮತಗಳು, ಮಠಗಳು, ಬೈರಾಗಿ ಬೈರವರು
ನೂರುಕಡೆ ಜಂಜಾಟ, ಜನಪತಿಯ ಎದುರಲ್ಲೆ
ಕ್ಷಣ ಕ್ಷಣಕೆ ವಸ್ತ್ರಾಪಹರಣ
ಮಾನಿನಿಯರಿಗೆ ಬರೆದ ಮರಣ ಶಾಸನ...

ದುಡಿದವನಿಗೆ ಧನ
ಬಡಿವವಗೇ ಎಲ್ಲ ಮಾನ
ಪಾಂಡವರೆಲ್ಲ ಸೇರಿದ್ದು ಕೌರವ ಸೇನೆ!
ಕಾರಣĝಕೃಷ್ಣಾ ಬೊಬ್ಬಿಟ್ಟರು ಬರಲಿಲ್ಲ ನೀನು.
ಬಾ ಕೃಷ್ಣ... ಬೇಗ ಬಾ ಕೃಷ್ಣಾ ಮರಳಿ ಬಾ
ಮಾಡು ಮಹಾಯುದ್ಧ, ಉಳಿಯಲಿ ಧರ್ಮ
ಸುಳ್ಳಾಗದಿರಲಿ ಗೀತೆĝ "**ಸಂಭವಾಮಿ**
**ಯುಗೇ ಯುಗೇ**"
**- ಪರ್ಜನ್ಯ**

## ದೇವರ ನಾಮ

**(ಪಡುಬಿದ್ರೆ ಉದಯಾದ್ರಿ ಗಣಪತಿ ಸುತ್ತಿ)**

ಗಜಮುಖನೇ ಸಲಹೋ । ಎಮ್ಮನು
ಗಜಮುಖನೇ ಸಲಹೋ ॥ ಪಲ್ಲವಿ ॥
ಗಜಮುಖ ನಿನ್ನಯ । ಪಾದವ ನಂಬಿದೆ ।
ಬಿಡದೆ ರಕ್ಷಿಸೊ ಎಮ್ಮ । ಅನವರತವು ನೀ ॥ಗಜ॥

ಮೂಷಿಕ ವಾಹನ ಮಂಗಳ ಮೂರ್ತಿ।
ಮಹಾ ಮಹಿಮ ಮಹೇಶ್ವರ ಸುತನೇ ॥ಗಜ॥

ಶ್ರೀ ಗಣನಾಥನೆ । ಶಂಕರ ಸುತನೇ ।
ಸಕಲ ಸುರಾಸುರ ವಂದಿತ ದೇವನೆ ॥ಗಜ॥

ವಿಘ್ನ ವಿದೂರನೆ ವಿಘ್ನೇಶ್ವರನೇ
ವಿಶ್ವ ವಂದಿತನೆ ಶ್ರೀ । ಉದಯಾದ್ರೀಶನೆ ॥ಗಜ॥

**ಕೃಪೆ : ಪಿ. ಗೀತಾ. ಎಸ್.ಸ್ವಾಮಿ**

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ದಿ। ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎಸ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣ ರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ.

## ಮಾಂಗಲ್ಯಂ ತಂತುನಾನೇನ ....

ತಾಳೆಪ್ಪಾಡಿ ಶ್ರೀಮತಿ ವತ್ಸಲಾ ಮತ್ತು ಶ್ರೀ ತಾಳೆಪ್ಪಾಡಿ ಭಾಗವತ್ ಗೋಪಾಲಕೃಷ್ಣರವರ ಪುತ್ರ **ಗಣೇಶ್ ಪ್ರಸಾದ್** ಹಾಗೂ ಶ್ರೀಮತಿ ಕುಸುಮಾ ಮತ್ತು ಶ್ರೀ ಕಾಪು ಮಾಧವರಾವ್ ಇವರ ಪುತ್ರಿ **ಪೂರ್ಣಿಮಾ** ಇವರ ವಿವಾಹವು ದಿನಾಂಕ 30-04-2015ರಂದು ಹೊಸಬೆಟ್ಟು ನವಗಿರಿ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★ ★★★

ಶ್ರೀಮತಿ ಶಾಂತಾ ಮತ್ತು ಶ್ರೀ ಚಂದ್ರಶೇಖರ ಹೆಬ್ಬಾರ್ ಇವರ ಪುತ್ರ **ನಾಗರಾಜ** ಹಾಗೂ ಕುಂಜಾರುಗಿರಿ ಪಡುಬೆಳ್ಳೆಯ ಶ್ರೀಮತಿ ಶಾರದಾ ಮತ್ತು ಶ್ರೀ ಮಾಧವರಾವ್ ಇವರ ಪುತ್ರಿ **ಸೌಮ್ಯಾ** ಇವರ ವಿವಾಹವು ದಿನಾಂಕ 01-05-2015ರಂದು ಪಡುಬೆಳ್ಳೆಯ ಪಾಜಕಾ ಕ್ಷೇತ್ರದಲ್ಲಿ ನೆರವೇರಿತು.

★★★ ★★★

ಶ್ರೀಮತಿ ವೀಣಾ ಜೆ ರಾವ್ ಮತ್ತು ಶ್ರೀ ಬಿ.ಜಯರಾಮರಾವ್ ಉಡುಪಿ ಇವರ ಪುತ್ರ **ಸೌರಭ್** ಹಾಗೂ ಶ್ರೀಮತಿ ಮಾಧವಿ ಎಂ.ಶಿರೋಳ್ಕರ ಮತ್ತು ಶ್ರೀ ಮೋಹನ ಶ್ರೀನಿವಾಸ ಶಿರೋಳ್ಕರ ಹುಬ್ಬಳ್ಳಿ ಇವರ ಪುತ್ರಿ **ಅಪೂರ್ವ** ಇವರ ವಿವಾಹವು ದಿನಾಂಕ 03-05-2015 ರಂದು ಹುಬ್ಬಳ್ಳಿಯ ಭವಾನಿ ನಗರದ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿ ಮಠದ ಶ್ರೀ ಸುಜಯೇಂದ್ರ ತೀರ್ಥರ ಮಂಗಳ ಕಾರ್ಯಾಲಯದಲ್ಲಿ ನೆರವೇರಿತು.

★★★ ★★★

ಶ್ರೀಮತಿ ರತ್ನಮಾಲಾ ಮತ್ತು ಶ್ರೀ ರಾಮಚಂದ್ರರಾವ್ ಬಾರಕೂರು ಇವರ ಪುತ್ರ **ರೋಹಿತ್ ಕುಮಾರ್** ಹಾಗೂ ಶ್ರೀಮತಿ ಭಾಗೀರಥಿ ಮತ್ತು ಕೀರ್ತಿಶೇಷ ರಾಮಚಂದ್ರ ರಾವ್ ಕರೂರು ಇವರ ಪುತ್ರಿ **ಸ್ನೇಹಾ** ಇವರ ವಿವಾಹವು ದಿನಾಂಕ 01-05-2015ರಂದು ಹಾವೇರಿ ಜಿಲ್ಲಾ ರಾಣಿಬೆನ್ನೂರು ತಾಲೂಕಿನ ಕವಲೆತ್ತು ಗ್ರಾಮದ ಶ್ರೀ ಮಾರ್ಗದ ದುರುಗಮ್ಮ ದೇವಿ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★ ★★★

ಶ್ರೀಮತಿ ರಾಜೇಶ್ವರೀ ಮತ್ತು ಶ್ರೀ ಅಶೋಕರಾವ್‌ರವರ ಪುತ್ರ **ಅರುಣ** ಹಾಗೂ ಶ್ರೀಮತಿ ಸಾವಿತ್ರಿ ಮತ್ತು ಶ್ರೀ ವೆಂಕಟರಮಣರಾವ್ ಇವರ ಪುತ್ರಿ **ಚೈತ್ರ** ಇವರ ವಿವಾಹವು ದಿನಾಂಕ 04-05-2015ರಂದು ಬಿದ್ಕಲ್‌ಕಟ್ಟೆಯ ಮಹಾಲಕ್ಷ್ಮೀ ಸಭಾಭವನದಲ್ಲಿ ನೆರವೇರಿತು.

★★★ ★★★

ಶ್ರೀಮತಿ ಕೃಷ್ಣವೇಣಿ ಮತ್ತು ಶ್ರೀ ಚಿಟ್ಪಾಡಿ ರಮೇಶ್‌ರಾಯರ ಪುತ್ರ **ಅಶ್ವಿನ್** ಹಾಗೂ ಶ್ರೀಮತಿ ಶಶಿಕಲಾ ಮತ್ತು ಶ್ರೀ ಬೊಕ್ಕಸ ಭಾಸ್ಕರರಾಯರ ಪುತ್ರಿ **ಅಶ್ವಿತಾ** ಇವರ ವಿವಾಹವು ದಿನಾಂಕ 10-05-2015ರಂದು ಮೂಡಬಿದರೆಯ ಮಹಾವೀರ ಭವನದಲ್ಲಿ ನೆರವೇರಿತು.

★★★ ★★★

ಕಿರಿಮಂಜೇಶ್ವರದ ಶ್ರೀಮತಿ ಅನಸೂಯಾ ಮತ್ತು ಶ್ರೀ ಕೆ.ಬಾಲಕೃಷ್ಣ ಶ್ಯಾನುಭೋಗರ ಪುತ್ರ **ಮಂಥನ್** ಹಾಗೂ ಪಡುಬೆಳ್ಳೆ ಶ್ರೀಮತಿ ಅಹಲ್ಯಾ ಮತ್ತು ಶ್ರೀ ಅರುಣ್‌ರಾವ್ ಬೆಳ್ಳೆ ಇವರ ಪುತ್ರಿ **ಅಪರ್ಣಾ** ಇವರ ವಿವಾಹವು ದಿನಾಂಕ 11-05-2015ರಂದು ಉಡುಪಿ ಅಜ್ಜರಕಾಡು ಗೋವಿಂದ ಕಲ್ಯಾಣ ಮಂಟಪದಲ್ಲಿ ನೆರವೇರಿತು.

ಶ್ರೀಮತಿ ಆಶಾ ಮತ್ತು ಶ್ರೀ ರತನ್ ಕುಮಾರ್ ರಾವ್‌ರ ಪುತ್ರಿ **ಪ್ರಿಯಾಂಕ** ಹಾಗೂ ಶ್ರೀಮತಿ ಗೀತಾ ಮತ್ತು ಶ್ರೀಕಾಂತ ರಾವ್ ಎಮ್. ರವರ ಪುತ್ರ **ವಿವೇಕ್** ಇವರ ವಿವಾಹವು ದಿನಾಂಕ 30-04-2015ರಂದು ಶೇಷಶಯನ ಹಾಲ್ ಕಿದಿಯೂರು ಹೋಟೆಲ್ ಉಡುಪಿಯಲ್ಲಿ ಜರುಗಿತು.

★★★ ★★★

ಕೊಪ್ಪ ತಾಲೂಕು ನಾರ್ವೆಯ ಸೋಮಶೇಖರ ಭಟ್ ಮತ್ತು ಶ್ರೀಮತಿ ಶಶಿಕಲಾ ದಂಪತಿಗಳ ಪುತ್ರ **ನಟೇಶ** ಹಾಗೂ ಉಡುಪಿ ಪೆರ್ಕಳ 80 ಬಡಗುಬೆಟ್ಟು ನಲ್ಲಿರುವ ಶ್ರೀ ಎಮ್.ಕೆ. ಸುಬ್ರಹ್ಮಣ್ಯ ಶರ್ಮ ಮತ್ತು ಶ್ರೀಮತಿ ವತ್ಸಲಾರವರ ಪುತ್ರಿ **ದಿವ್ಯ** ಇವರ ವಿವಾಹವು ತಾ.30-04-2015ರಂದು ಶಾರದಾ ಮಂಟಪ ಕುಂಜಿಬೆಟ್ಟು ಉಡುಪಿಯಲ್ಲಿ ಜರುಗಿತು.

★★★ ★★★

ಇಲಂತೋಡಿ ಎ.ಸಿ. ಸದಾನಂದ ರಾವ್ ಮತ್ತು ಶ್ರೀಮತಿ ಸ್ವರ್ಣಲತಾರವರ ಪುತ್ರ **ಸುಮಿತ್ ರಾಜ್** ಎ.ಸಿ. ಹಾಗೂ ಕಡಬ ಕುಂಬಾಟ್ ಬದೆಂಜ ಶಶಿಧರ ರಾವ್ ಮತ್ತು ಶ್ರೀಮತಿ ನಾಗರತ್ನಾ ಇವರ ಪುತ್ರಿ **ಶರ್ಮಿಳಾ.ಬಿ** ಇವರ ವಿವಾಹವು ದಿನಾಂಕ 30-04-2015ರಂದು ಪುತ್ತೂರು ತಾಲೂಕು ರಾಮಕುಂಜದ ಶ್ರೀ ರಾಮಕುಂಜೇಶ್ವರ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ಜರುಗಿತು.

★★★ ★★★

ಕಲ್ಮಡ್ಕದ ಶ್ರೀಮತಿ ಶಶಿಕಲಾ ಮತ್ತು ಜಯವಂತರ ಪುತ್ರ **ಪ್ರೀತಮ್** ಹಾಗೂ ಶ್ರೀಮತಿ ಮೋಹಿನಿ ಮತ್ತು ಮಾರ್ಪಳ್ಳಿ ಮೋಹನರಾಯರ ಪುತ್ರಿ **ಸವಿತಾ** ಇವರ ವಿವಾಹವು ದಿನಾಂಕ 01-05-2015ರಂದು ಉಡುಪಿ ಚಿಟ್ಪಾಡಿ ಶಾರದಾಂಬ ದೇವಸ್ಥಾನದ ಸಭಾ ಭವನದಲ್ಲಿ ಜರುಗಿತು.

★★★ ★★★

ಮಸ್ಕಿಬೈಲು ಚಂದ್ರಶೇಖರರಾವ್ ಮತ್ತು ಶ್ರೀಮತಿ ಗೀತಾರವರ ಪುತ್ರ **ಸದಾನಂದ** ಹಾಗೂ ಶ್ರೀ ಅನಾರು ಕೃಷ್ಣ ಶರ್ಮ ಮತ್ತು ಶ್ರೀಮತಿ ಲೀಲಾವತಿ ಅವರ ಪುತ್ರಿ **ಅನುಪಮಾ** ಇವರ ವಿವಾಹವು ದಿನಾಂಕ 04-05-2015 ರಂದು ಬಿ.ಸಿ. ರೋಡಿನಲ್ಲಿರುವ "ತುಳು ಶಿವಳ್ಳಿ ಸಮುದಾಯ ಭವನ"ದಲ್ಲಿ ಜರುಗಿತು.

★★★ ★★★

ಎರ್ಮಾಳು ಜನಾರ್ದನರಾವ್ ಮತ್ತು ಶ್ರೀಮತಿ ಐ ಕೆ ಗೀತಾರಾವ್ ಇವರ ಪುತ್ರ **ಸಾತ್ವಿಕ್** ಹಾಗೂ ಐರ್‌ಬೈಲು ಸಿದ್ಧಾಪುರದ ಮಾರ್ಪಳ್ಳಿ ಶ್ರೀಮತಿ ಉಮಾವತಿ ಮತ್ತು ಶ್ರೀ ಶ್ರೀನಿವಾಸರಾವ್ ಇವರ ಪುತ್ರಿ **ಮಾನಸ** ಇವರ ವಿವಾಹವು ದಿನಾಂಕ 08-05-2015 ರಂದು ಉಡುಪಿ ಒಳಕಾಡು ಪದ್ಮಾವತಿ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★ ★★★

ಪುತ್ತೂರು ತಾಳೆಪ್ಪಾಡಿ ರಮಾನಂದರಾವ್ ಮತ್ತು ಶ್ರೀಮತಿ ಚಂದ್ರಚೂಡ ಇವರ ಪುತ್ರ **ಅಭೀಷ್ ಕುಮಾರ್** ಹಾಗೂ ಅಲೆವೂರು ಶ್ರೀ ಭಾಗ್ಯಚಂದ್ರರಾವ್ ಮತ್ತು ಶ್ರೀಮತಿ ಲತಾ ಇವರ ಪುತ್ರಿ **ದೀಕ್ಷಾ** ಇವರ ವಿವಾಹವು ದಿನಾಂಕ 11-05-2015ರಂದು ಉಡುಪಿ ಕುಂಜಿಬೆಟ್ಟು ಶಾರದಾ ಮಂಟಪದಲ್ಲಿ ನೆರವೇರಿತು.

## ಬ್ರಹ್ಮೋಪದೇಶ

**ಚಿ। ಅನುರಾಜ್**

ಉಡುಪಿ ಪಡುಬೆಳ್ಳೆಯ ಶ್ರೀಮತಿ ಮಮತಾ ಮತ್ತು ಶ್ರೀ ಶಿವಕುಮಾರ್ ಇವರ ಪುತ್ರ ಅನುರಾಜ್‌ನ ಬ್ರಹ್ಮೋಪದೇಶವು 23-04-2015ರಂದು ಉಡುಪಿ ಕುಂಜಿಬೆಟ್ಟು ಶ್ರೀ ಕೃಷ್ಣ ಪ್ರಜ್ಞಾಪ್ರತಿಷ್ಠಾನದಲ್ಲಿ ನೆರವೇರಿತು.

★★★ ★★★

**ಚಿ। ತುಷಾರ**

ಶ್ರೀಮತೀ ಪೂರ್ಣಿಮಾ ಮತ್ತು ಶ್ರೀ ಬಿ ರಾಮಕೃಷ್ಣ ಇವರ ಪುತ್ರ ತುಷಾರನ ಬ್ರಹ್ಮೋಪದೇಶವು ದಿನಾಂಕ 10-05-2015 ರಂದು ಪಾವಂಜೆ ಶ್ರೀ ಜ್ಞಾನ ಶಕ್ತಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದ ಶಾರದ್ವತ ಯಜ್ಞ ಮಂಟಪದಲ್ಲಿ ನೆರವೇರಿತು.

★★★ ★★★

**ಚಿ। ಮನೋಜ**

ಚಾರ ಮುಂಡಾಡಿಜಡ್ಡು ಶ್ರೀಮತಿ ಶೈಲಜಾ ಮತ್ತು ಶ್ರೀ ಉಪೇಂದ್ರ ಹೆಬ್ಬಾರ್ ಇವರ ಪುತ್ರ ಮನೋಜನ ಬ್ರಹ್ಮೋಪದೇಶವು ದಿನಾಂಕ 13-05-2015ರಂದು ಚಾರ ಮುಂಡಾಡಿಜಡ್ಡು ವಿನ ಸ್ವಗೃಹ "ಶ್ರೀವಾಸ್ತವ"ದಲ್ಲಿ ನೆರವೇರಿತು.

★★★ ★★★

**ಚಿ। ಪ್ರಥಮ್**

ಶ್ರೀಮತಿ ಸಂಧ್ಯಾ ಮತ್ತು ಶ್ರೀ ಗಣೇಶ್ ರಾವ್ ಪೆರ್ಡೂರು ಇವರ ಪುತ್ರ ಪ್ರಥಮ್‌ನ ಬ್ರಹ್ಮೋಪದೇಶವು ದಿನಾಂಕ 01-05-2015 ರಂದು ಬೆಂಗಳೂರಿನ ಬನಶಂಕರಿಯ ಶ್ರೀಕೃಷ್ಣ ಸಭಾಂಗಣ(ರುಕ್ಮಿಣಿ)ದಲ್ಲಿ ನೆರವೇರಿತು.

★★★ ★★★

**ಚಿ। ರೋಹನ್ - ಚಿ। ರೋಹಿತ್**

ಕುಂಭಾಶಿಯ ಶ್ರೀಮತಿ ಸ್ಮಿತಾ ರಾಣಿ ಮತ್ತು ಶ್ರೀ ಕಾಶೀನಾಥ ಇವರ ಪುತ್ರರಾದ ರೋಹನ್ ಹಾಗೂ ರೋಹಿತ್ ಇವರ ಬ್ರಹ್ಮೋಪದೇಶವು ದಿನಾಂಕ 01-05-2015ರಂದು ಪಾರಂಪಳ್ಳಿ ಶ್ರೀ ಮಹಾ ವಿಷ್ಣುಮೂರ್ತಿ ದೇವಸ್ಥಾನದ ಸಭಾಭವನದಲ್ಲಿ ನೆರವೇರಿತು.

## ದಾಂಪತ್ಯ ಜೀವನದ ರಜತ ಸಂಭ್ರಮ

ಪಡುಬೆಳ್ಳೆಯಲ್ಲಿ ವಾಸ್ತವ್ಯದಲ್ಲಿರುವ ಶ್ರೀಮತಿ ಸುಧಾಮಣಿ ಮತ್ತು ಶ್ರೀ ಸತ್ಯನಾರಾಯಣ ರಾವ್ ದಂಪತಿಗಳ ವೈವಾಹಿಕ ರಜತ ಮಹೋತ್ಸವ ಕಾರ್ಯಕ್ರಮವು ಲಕ್ಷ್ಮೀಹೃದಯಹೋಮ, ಮಹಾಪೂಜೆ,ಮತ್ತು ಬ್ರಾಹ್ಮಣ ಸುವಾಸಿನಿ ಆರಾಧನೆಯೊಂದಿಗೆ ದಿನಾಂಕ 28-04-2015ರಂದು ಪಡುಬೆಳ್ಳೆಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಬಂಧು ಬಾಂಧವರೊಡಗೂಡಿ ನೆರವೇರಿತು.

## ವಿಳಾಸ ಬದಲಾವಣೆ

M. PADMANANDA RAO
No.002, "Sriranga",
Bhujanga Rao Road,
Volakadu, Udupi-576101

## ಗೃಹ ಪ್ರವೇಶ

ಬೆಳ್ಳರ್ಪಾಡಿ ಶ್ರೀಮತಿ ನಿರ್ಮಲಾ ಮತ್ತು ಶ್ರೀ ಬಿ ಸುಧಾಕರರಾವ್‌ರವರು ಬೆಳ್ಳರ್ಪಾಡಿ ಪಡುಮನೆಯಲ್ಲಿ ನಿರ್ಮಿಸಿದ ನೂತನ ಮನೆ **ಶ್ರೀ ವಿಷ್ಣುಪ್ರಸಾದ**ದ ಪ್ರವೇಶೋತ್ಸವವನ್ನು ದಿನಾಂಕ 23-04-2015ರಂದು ನೆರವೇರಿಸಿದರು.

★★★ ★★★

ಶಿರ್ವ ಮಾಣಿಬೆಟ್ಟು ಶ್ರೀಮತಿ ಜಯಶ್ರೀ ಮತ್ತು ಶ್ರೀ ಪ್ರಕಾಶ್‌ರಾವ್(ಎಸ್ ಕೃಷ್ಣಾನಂದರಾಯರ ಪುತ್ರ) ಮಾಣಿಬೆಟ್ಟಿನಲ್ಲಿ ನಿರ್ಮಿಸಿದ ನೂತನ ಮನೆ **ಪಾರಿಜಾತ**ದ ಪ್ರವೇಶೋತ್ಸವವನ್ನು ದಿನಾಂಕ 11-05-2015 ರಂದು ನೆರವೇರಿಸಿದರು.

★★★ ★★★

ಉಡುಪಿಯ ಶ್ರೀಮತಿ ಶಿಲ್ಪ ಮತ್ತು ಶ್ರೀ ಮಾಧವರಾವ್ (ದಿ। ಶ್ರೀಪತಿ ರಾವ್‌ರವರ ಪುತ್ರ)ಉಡುಪಿ ವಾದಿರಾಜ 3ನೇ ಅಡ್ಡ ರಸ್ತೆಯಲ್ಲಿ ನಿರ್ಮಿಸಿದ ನೂತನ ಮನೆ **ರಾಜಶ್ರೀ** ಇದರ ಪ್ರವೇಶೋತ್ಸವವನ್ನು ದಿನಾಂಕ 26-04-2015ರಂದು ನೆರವೇರಿಸಿದರು.

★★★ ★★★

ನಂದಳಿಕೆ ಶ್ರೀ ಶಂಕರರಾಯರ ಪುತ್ರ ಶ್ರೀ ಮನೋಜ್ ಕುಮಾರ್ ನಂದಳಿಕೆ ಬೈರಬೆಟ್ಟುವಿನಲ್ಲಿ ನಿರ್ಮಿಸಿದ ನೂತನ ಮನೆ **ಇಂದಿರಾ ಸದನ**ದ ಪ್ರವೇಶೋತ್ಸವವನ್ನು ತಾ.04-05-2015 ರಂದು ನೆರವೇರಿಸಿದರು.

★★★ ★★★

ಶ್ರೀಮತಿ ವಿದ್ಯಾಶ್ರೀ ಮತ್ತು ಶ್ರೀ ವಿಕ್ರಂ ರಾವ್ ಕುಡುಪು (ಶ್ರೀಮತಿ ಮತ್ತು ಶ್ರೀ ವಿಜಯಕುಮಾರ್ ರಾವ್ ಕುಡುಪು ಇವರ ಪುತ್ರ) ಇವರು ಬೆಂಗಳೂರಿನ ಕೆ.ಆರ್.ಪುರದ ಲಾಲ್ ಬಹದ್ದೂರ್ ಶಾಸ್ತ್ರಿನಗರದ "ಕ್ಲಬ್ ನೆಸ್ಟ್ ಲೇಕ್ ವ್ಯೂ" ಎಪಾರ್ಟ್‌ಮೆಂಟ್‌ನಲ್ಲಿ ನಿರ್ಮಿಸಿದ ನೂತನ ಗೃಹದ ಪ್ರವೇಶೋತ್ಸವವನ್ನು ದಿನಾಂಕ 02-05-2015ರಂದು ನೆರವೇರಿಸಿದರು.

## ಪತಂಜಲಿ ಯೋಗ ಶಿಬಿರ

ಪತಂಜಲಿ ಯೋಗ ಶಿಬಿರವು ತಾ. 26-03-2015ರಿಂದ ತಾ.31-03-2015ರ ವರೆಗೆ ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ಮಂಟಪದಲ್ಲಿ ನೆರವೇರಿತು. ಸುಮಾರು 40 ಜನ ಶಿಬಿರಾರ್ಥಿಗಳು ಪ್ರತಿ ದಿನ ಶಿಬಿರದಲ್ಲಿ ಪಾಲ್ಗೊಂಡು ಪ್ರಯೋಜನವನ್ನು ಪಡೆದರು. ಶ್ರೀ ಸದಾನಂದರಾವ್ ಚಿಟ್ಪಾಡಿ ಹಾಗೂ ಶ್ರೀ ವೆಂಕಟರಮಣ ರಾವ್ ಕೆ. ಅವರು ಶಿಬಿರಾರ್ಥಿಗಳಿಗೆ ಬೇಕಾದ ಮಾರ್ಗದರ್ಶನ ವನ್ನು ನೀಡಿ ಸಹಕರಿಸಿದರು.

## ಬಾಲಸುಬ್ರಹ್ಮಣ್ಯ ಶರ್ಮ ಜನರಲ್ ಮೆನೇಜರ್ ಆಗಿ ನೇಮಕ

ಶ್ರೀಮತಿ ಅಹಲ್ಯ ಮತ್ತು ಶ್ರೀ ಎ.ಪಿ.ವೈ. ಶರ್ಮ, ಬೆಂಗಳೂರು ಇವರ ಪುತ್ರ ಬಾಲಸುಬ್ರಹ್ಮಣ್ಯ ಶರ್ಮ ಇವರು ಬೆಂಗಳೂರಿನ ಜಿಗಣಿಯಲ್ಲಿರುವ ಯು.ಪಿ.ಎಸ್. ಉತ್ಪಾದಕ ಮತ್ತು ರಫ್ತುದಾರ ಪ್ರತಿಷ್ಠಿತ ಸಂಸ್ಥೆ SCHNEIDER ELECTRIC ಕಂಪೆನಿಯಲ್ಲಿ ಜನರಲ್ ಮೆನೇಜರ್ ಹುದ್ದೆಗೆ ನೇಮಕ ಗೊಂಡಿದ್ದಾರೆ. ಅವರಿಗೆ ಶ್ರೀಶಾರದಾ ಅಭಿನಂದನೆಗಳು.

## ನಿಧನ

**ಎರ್ಮಾಳ್ ರಘುನಂದನರಾವ್**

ಮಂಗಳೂರು ಬೊಕ್ಕಪಟ್ಟಣದ ನಿವಾಸಿ ಎರ್ಮಾಳ್ ರಘುನಂದನರಾವ್(79ವರ್ಷ) ಬೆಂಗಳೂರಿನ ತಮ್ಮ ಪುತ್ರನ ಮನೆಯಲ್ಲಿ ದಿನಾಂಕ 04-04-2015ರಂದು ನಿಧನರಾದರು. ಮೃತರು ಪತ್ನಿ ಮೀರಾ ಆರ್ ರಾವ್ ಸಹಿತ ಓರ್ವಪುತ್ರ, ಓರ್ವ ಪುತ್ರಿ ಮತ್ತು ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

**ಮಾಂಟ್ರಾಡಿ ಶಶಿಕಾಂತ ರಾವ್**

ತಾ.14-04-2015 ರಂದು ಉಡುಪಿ ದೊಡ್ಡಣಗುಡ್ಡೆ ನಿವಾಸಿ ಶ್ರೀ ಮಾಂಟ್ರಾಡಿ ಶಶಿಕಾಂತ ರಾವ್ (74ವ) ಇವರು ಅಲ್ಪಕಾಲದ ಅಸೌಖ್ಯದಿಂದ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

**ವಿಶಾಲಾಕ್ಷಮ್ಮ**

ಉಡುಪಿ ಚಿಟ್ಪಾಡಿಯಲ್ಲಿ ವಾಸ್ತವ್ಯದಲ್ಲಿದ್ದ ಶ್ರೀಮತಿ ವಿಶಾಲಾಕ್ಷಮ್ಮನವರು (ದಿ। ಬೆಳ್ಮಣ್ಣು ನಾರಾಯಣರಾಯರ ಧರ್ಮಪತ್ನಿ) ದಿನಾಂಕ 24-04-2015ರಂದು ತಮ್ಮ 88ನೇ ವರ್ಷ ಪ್ರಾಯದಲ್ಲಿ ಮಹಾರಾಷ್ಟ್ರದ ದೈವಾಡಿಯಲ್ಲಿರುವ ತಮ್ಮ ಪುತ್ರನ ಮನೆಯಲ್ಲಿ ನಿಧನರಾದರು. ಮೃತರು ನಾಲ್ವರು ಪುತ್ರರು, ಓರ್ವ ಪುತ್ರಿ ಸಹಿತ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

**2015ರ ಏಪ್ರಿಲ್ ತಿಂಗಳಲ್ಲಿ ದಕ್ಷಿಣಾಮ್ನಾಯ ಶ್ರೀಕ್ಷೇತ್ರ ಶೃಂಗೇರಿಯ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರು ತಮ್ಮ ಶಿಷ್ಯ ಶ್ರೀ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿಯವರ ಜೊತೆಗೂಡಿ ತಮ್ಮ ಪರಿವಾರ ಸಮೇತ ದಕ್ಷಿಣಕನ್ನಡ ಜಿಲ್ಲೆಯ ಹಲವು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡರು**







## ಶ್ರೀ ಶಂಕರ ಜಯಂತಿ ಆಚರಣೆ....

...1ನೇ ಪುಟದಿಂದ

### ಕಾರ್ಕಳದಲ್ಲಿ....

"ಅಜ್ಞಾನದ ಕತ್ತಲಲ್ಲಿ ಜನ ಮುಳುಗಿದಾಗ ವಿಜ್ಞಾನದ ಬೆಳಕಾಗಿ ಜನಿಸಿ ರಾಷ್ಟ್ರೀಯ ಏಕತೆಯ ಹರಿಕಾರರಾದವರು ಶ್ರೀ ಶಂಕರ ಭಗತ್ಪಾದರು. ಸರ್ವೇ ಜನಾಃ ಸುಖೀನೋಭವಂತು ಎಂಬ ತತ್ವವನ್ನು ಸಾರುತ್ತಾ ಬೇರೆಯುವರಲ್ಲಿರುವ ಒಳ್ಳೆದನ್ನು ಗೌರವಿಸುವುದು ಶ್ರೀ ಶಂಕರರಾಚಾರ್ಯರ ಧ್ಯೇಯವಾಗಿತ್ತು. ಇಡೀ ಭರತ ಖಂಡವನ್ನು ಕಾಲ್ನಡಿಗೆಯಲ್ಲೇ ಸಂಚರಿಸಿ ಜನರ ಮನಸ್ಸಿನಲ್ಲಿ ಮೂಡಿದ ಮೂಢನಂಬಿಕೆ, ಪೊಳ್ಳು ಡಂಭಾಚಾರವನ್ನು ಹೋಗಲಾಡಿಸಿ ಭಜಗೋವಿಂದಂ ಎಂಬ ಸರಳ ಭಜನೆಯ ಮೂಲಕ ಜನರಲ್ಲಿ





ಭಗವದ್ಭಕ್ತಿಯನ್ನು ಮೂಡಿಸಿದ ಮಹಾಚೇತನ ಶ್ರೀ ಶಂಕರಾಚಾರ್ಯರು. ನೇಪಾಳದ ಪಶುಪತಿ ದೇವಸ್ಥಾನದಲ್ಲಿ ಪೂಜೆಯ ವ್ಯವಸ್ಥೆಯನ್ನು ಮಾಡುವುದಲ್ಲದೆ ದಕ್ಷಿಣದ ಶೃಂಗೇರಿಯಲ್ಲಿಯೂ ಶಾರದಾಂಬೆಯ ದೇವಸ್ಥಾನವನ್ನು ನಿರ್ಮಿಸಿ ಅದ್ವೈತ ತತ್ವವನ್ನು ಜಗತ್ಪ್ರಸಿದ್ಧಗೊಳಿಸಿದರು. ಜಾತಿ, ಮತ, ಬೇಧವಿಲ್ಲದೆ ಇಡೀ ಭರತ ಖಂಡದ ಜನರು ಎಲ್ಲರೂ ಒಂದೇ ಎಂಬ ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸಿದ ಮಹಾನುಭಾವ ಶ್ರೀ ಶಂಕರರ ಜನ್ಮ ದಿನವನ್ನು ತತ್ವಜ್ಞಾನಿಗಳ ದಿನವೆಂದು ಆಚರಿಸುತ್ತಿರುವುದು ಅತ್ಯಂತ ಸೂಕ್ತವಾಗಿದೆ" ಎಂದು ಶ್ರೀ ಸಿದ್ಧಾಪುರ ವಾಸುದೇವ ಭಟ್ ಪ್ರಾಧ್ಯಾಪಕರು, ನಿಟ್ಟೆ ಶಿಕ್ಷಣ ಸಂಸ್ಥೆ ಕಾರ್ಕಳ ಇವರು ನುಡಿದರು.

ಶ್ರೀಯುತರು ಕಾರ್ಕಳ ಶ್ರೀ ಶಂಕರ ಪ್ರತಿಷ್ಠಾನದ ವತಿಯಿಂದ ಶ್ರೀ ವಿ. ಮನೋಹರ ರಾಯರ ಮನೆ 'ವಾಸುಕೀ'ಯಲ್ಲಿ ನಡೆದ ಶಂಕರ ಜಯಂತಿ ಉತ್ಸವ ಕಾರ್ಯಕ್ರಮದಲ್ಲಿ ಪ್ರವಚನಕಾರರಾಗಿ ಮಾತನಾಡುತ್ತಿದ್ದರು. ಶಂಕರ ಜಯಂತಿ ಪ್ರಯುಕ್ತ ಮಕ್ಕಳಿಗೆ ಶ್ರೀ ಶಂಕರಾಚಾರ್ಯಕೃತ ಶ್ಲೋಕಗಳ ಸ್ಪರ್ಧೆಗಳನ್ನು ಶ್ರೀ ರಾಜಶೇಖರ್ ನಿಟ್ಟೆ ಇವರು ನಡೆಸಿಕೊಟ್ಟರು.

ಕಾರ್ಯಕ್ರಮವು ಶ್ರೀ ಯಾಜಿ ನಿರಂಜನ ಭಟ್ ಪಾವಂಜೆ ಇವರ ನೇತೃತ್ವದಲ್ಲಿ ನಡೆಯಿತು. ವಿಷ್ಣು ಸಹಸ್ರನಾಮ ಸಂಕೀರ್ತನೆ, ರುದ್ರ ಪಾರಾಯಣ, ಶ್ರೀ ಶಂಕರಭಗವತ್ಪಾದಾಚಾರ್ಯಾಷ್ಟೋತ್ತರಶತನಾಮಾವಲಿಃ ಸಂಕೀರ್ತನೆ ಹಾಗೂ ಮಹಿಳಾ ವಿಭಾಗದವರಿಂದ ಭಜನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಶ್ರೀ ಯಾಜಿ ನಿರಂಜನ ಭಟ್‌ರವರು ಪೂಜೆಯನ್ನು ಸಾಂಗವಾಗಿ ನಡೆಸಿ ಪ್ರವಚನಕಾರರನ್ನು ಶೃಂಗೇರಿ ಮಠದ ಪರವಾಗಿ ಸನ್ಮಾನಿಸಿದರು. ಸ್ಪರ್ಧೆಗಳಲ್ಲಿ ಗೆದ್ದ ಮಕ್ಕಳಿಗೆ ಬಹುಮಾನ ವಿತರಿಸಿದರು. ಮಹಾಮಂಗಳಾರತಿಯೊಂದಿಗೆ ಶಂಕರ ಜಯಂತಿ ಉತ್ಸವವು ಶ್ರದ್ಧಾಭಕ್ತಿಪೂರ್ವಕವಾಗಿ ನಡೆಯಿತು. ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಮುರಳೀಧರ ಶರ್ಮ ನಿಟ್ಟೆ ಅಧ್ಯಕ್ಷತೆ ವಹಿಸಿ ಭಗವದ್ಭಕ್ತರನ್ನು ಸ್ವಾಗತಿಸಿದರು. ಮಹಿಳಾ ವಿಭಾಗದ ಅಧ್ಯಕ್ಷೆ ಶ್ರೀಮತಿ ಸಾವಿತ್ರಿ ಮನೋಹರ್ ಕಾರ್ಯಕ್ರಮ ನಿರ್ವಹಿಸಿ ಪ್ರತಿಷ್ಠಾನದ ಕಾರ್ಯದರ್ಶಿ ಶ್ರೀ ಶಿವರಾವ್ ನಕ್ರೆ ಧನ್ಯವಾದ ಸಲ್ಲಿಸಿದರು.

ಶ್ರೀ ಮನೋಹರ್ ರಾವ್ ದಂಪತಿಗಳು ಸುಹಾಸಿನಿಯರಿಗೆ ಹೂ, ಕುಂಕುಮ ಇತ್ತು, ಮಹನೀಯರಿಗೆ ಶಾಲು ನೀಡಿ ಉಪಚರಿಸಿದರು.

## ಕಾರ್ಕಳದಲ್ಲಿ ಶ್ರೀ ರಾಮನವಮಿ

ಕಾರ್ಕಳದ ಜೋಗುಳಬೆಟ್ಟು ಶ್ರೀರಾಮಧಾಮ ಧ್ಯಾನ ಮಂದಿರದಲ್ಲಿ ಶ್ರೀ ರಾಮ ನವಮಿಯನ್ನು ಭಕ್ತಿ–ಭಾವದೊಂದಿಗೆ ಆಚರಿಸಲಾಯಿತು. ಬೆಳಿಗ್ಗೆ ಶುದ್ಧ–ಪುಣ್ಯಾಹ, ಗಣಹೋಮ, ನಾಗಾರಾಧನೆ, ಏಕಾದಶ ರುದ್ರಾಭಿಶೇಕ, ಮಧ್ಯಾಹ್ನ ಶ್ರೀ ರಾಮಚಂದ್ರನಿಗೆ ಸಹಸ್ರ ನಾಮಾರ್ಚನೆಯೊಂದಿಗೆ ಮಹಾಪೂಜೆ ನೆರವೇರಿಸಲಾಯಿತು. ರಾತ್ರಿ ವಿವಿಧ ಭಜನಾ ತಂಡಗಳಿಂದ ಭಜನಾ ಕಾರ್ಯಕ್ರಮ ಮತ್ತು ದುರ್ಗಾನಮಸ್ಕಾರ ಪೂಜೆಯೂ ನೆರವೇರಿತು. ಶ್ರೀ ದೇವರಾಜ ಹೆಬ್ಬಾರ್, ಎಮ್ ಸುಬ್ರಹ್ಮಣ್ಯ ಭಟ್, ಪಾವಂಜೆ ಹಾಗೂ ಹೆಜಮಾಡಿ ಕೃಷ್ಣರಾಜಭಟ್ ಇವರ ಪೌರೋಹಿತ್ಯದಲ್ಲಿ ಕುಟುಂಬದ ಹಿರಿಯರಾದ ಕೋಲ್ಪೆ ಗೋಪಾಲಕೃಷ್ಣರಾಯರ ಮೂಲಕ ಮಂತ್ರಾಕ್ಷತೆ ಕೊಡಿಸಿ ಎಲ್ಲರನ್ನು ಹರಸಿದರು. ಧ್ಯಾನ ಮಂದಿರದ ವ್ಯವಸ್ಥಾಪಕ ಶ್ರೀ ಶಶಿಧರರಾವ್ ಕೋಲ್ಪೆ ಹಾಗೂ ಸಹೋದರ ಚಂದ್ರಶೇಖರರಾವ್ ಇವರ ಸಹಕಾರದಿಂದ ಕಾರ್ಯಕ್ರಮ ಸಂಪನ್ನಗೊಂಡಿತು.

**–ಜಿ ಕೆ ಕೋಲ್ಪೆ**

## ಬೆಳ್ತಂಗಡಿಯಲ್ಲಿ ವಾರ್ಷಿಕೋತ್ಸವ

''ನಾವು ಮಾಡಿದ ಎಲ್ಲ ಪಾಪ ಕರ್ಮಗಳನ್ನು ಕರಗಿಸುವ ಸಾಮರ್ಥ್ಯ ವೇದಗಳಿಗಿದೆ. ಬ್ರಾಹ್ಮಣನಾದವನು ವೇದಾಧ್ಯಯನ ಅನುಷ್ಠಾನ ಮಾಡದಿದ್ದರೆ ಮುಂದಿನ ಜನ್ಮದಲ್ಲಿ ಬುದ್ಧಿ ವಿಕಾರವಾಗುವುದು. ಹಿರಿಯರು ತಮ್ಮ ಮಕ್ಕಳಿಗೆ ಬ್ರಾಹ್ಮಣ್ಯದ ಪರಿಚಯ ಮಾಡಿ ಕೊಡುವ ವೇದಗಳನ್ನು ಕಲಿಸಿಕೊಡಬೇಕು'' ಎಂದು ಉಜಿರೆ ಎಸ್‌ಡಿಎಂ ಕಾಲೇಜಿನ ಸಂಸ್ಕೃತ ವಿಭಾಗದ ಮುಖ್ಯಸ್ಥ ಡಾ। ಶ್ರೀಧರ ಭಟ್ ಹೇಳಿದರು.

ಅವರು ಲ್ಯಾಲ ಶ್ರೀ ಸುಬ್ರಹ್ಮಣ್ಯ ಸಭಾಭವನದ ಸೂರ್ಯನಾರಾಯಣ ರಾವ್ ವೇದಿಕೆಯಲ್ಲಿ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ ಬೆಳ್ತಂಗಡಿ ಇದರ 18ನೇ ವಾರ್ಷಿಕೋತ್ಸವ ಮತ್ತು ಮಹಾಸಭೆಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು.

ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಮಾಜಿ ಆಡಳಿತ ಮೊಕ್ತೇಸರ ಎನ್.ಕೆ. ಜಗನ್ನಿವಾಸ ರಾವ್ ಅವರು ಶಂಕರಾಚಾರ್ಯರ ಭಾವಚಿತ್ರಕ್ಕೆ ಪುಷ್ಪಾಂಜಲಿ ಅರ್ಪಿಸಿ, ಪ್ರತಿಭೆಗಳನ್ನು ಪುರಸ್ಕರಿಸಿದರು. ಸ್ಥಾನಿಕ ಬ್ರಾಹ್ಮಣ ಸಭಾ ಅಧ್ಯಕ್ಷ ಪಿ. ಲಕ್ಷ್ಮೀನಾರಾಯಣ ರಾವ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಈ ಸಂದರ್ಭದಲ್ಲಿ ಪಾಕಶಾಸ್ತ್ರದಲ್ಲಿ ಪ್ರಾವೀಣ್ಯ ಪಡೆದ ಕೃಷ್ಣ ರಾವ್ ಕಲ್ಲಾಪು ಮತ್ತು ವೈದ್ಯಶಾಸ್ತ್ರದಲ್ಲಿ ವಿಶೇಷ ಸಾಧನೆ ಮೆರೆದ ಡಾ। ವಾಣಿ ಸುಗುಣ ಕುಮಾರ್ ಅವರನ್ನು ಸಮ್ಮಾನಿಸಲಾಯಿತು.

ವೇದಿಕೆಯಲ್ಲಿ ಮಹಿಳಾ ವಿಭಾಗದ ಅಧ್ಯಕ್ಷೆ ಶಾಂತಾ ಸುರೇಶ್, ಕಾರ್ಯದರ್ಶಿ ಸುಮಂಗಲಾ ಪ್ರಶಾಂತ್, ಸುಬ್ರಹ್ಮಣ್ಯ ಸಹಕಾರಿ ಸಂಘದ ಉಪಾಧ್ಯಕ್ಷ ಕನ್ಯಾಡಿ ಸತೀಶ್ ರಾವ್, ಶಿಬಿರದ ಗುರು ಅಜೇಯ ಹೆಬ್ಬಾರ್ ಉಪಸ್ಥಿತರಿದ್ದರು.

ನ್ಯಾಯವಾದಿ ಬಿ. ಕೆ. ಧನಂಜಯ ರಾವ್ ಸ್ವಾಗತಿಸಿ, ಪ್ರಸ್ತಾವಿಸಿದರು. ವಸಂತ ರಾವ್ ಕಾರ್ಯಕ್ರಮ ನಿರ್ವಹಿಸಿದರು. ಕಾರ್ಯದರ್ಶಿ ಶ್ರೀಪತಿ ರಾವ್ ವರದಿ ಮಂಡಿಸಿ, ಕೋಶಾಧಿಕಾರಿ ಹರೀಶ್ ರಾವ್ ಲೆಕ್ಕಪತ್ರ ಮಂಡಿಸಿದರು. ರಾಜೇಶ್ವರಿ ಸಮ್ಮಾನಿತರನ್ನು ಪರಿಚಯಿಸಿದರು. ಜಯಪ್ರಕಾಶ್ ಪ್ರತಿಭಾ ಪುರಸ್ಕೃತರನ್ನು ಪರಿಚಯಿಸಿದರು. ಉಪಾಧ್ಯಕ್ಷ ಡಾ। ಶ್ಯಾಮ ರಾವ್ ವಂದಿಸಿದರು. ಸದಸ್ಯ ಕುಟುಂಬದವರಿಗೆ ವಿವಿಧ ಸ್ಪರ್ಧೆಗಳನ್ನು ನಡೆಸಲಾಯಿತು. ಮಂಗಳೂರಿನ ಬಾಲಯಕ್ಷ ಕೂಟದ ಕಲಾವಿದರಿಂದ ಎಲ್ಲೂರು ರಾಮಚಂದ್ರ ರಾವ್ ನಿರ್ದೇಶನದಲ್ಲಿ ಷಣ್ಮುಖ ವಿಜಯ ಪೌರಾಣಿಕ ಪ್ರಸಂಗದ ಯಕ್ಷಗಾನ ನಡೆಯಿತು.

## ನಂದಳಿಕೆ ಬಾಲಚಂದ್ರರಾವ್‌ರಿಗೆ ಪ್ರಶಸ್ತಿ



ನಂದಳಿಕೆಯ ಮುದ್ದಣ ಕವಿಯ ಸಮಗ್ರ ಯಕ್ಷಗಾನ ಕೃತಿಗಳನ್ನು ಮರುಮುದ್ರಣಗೊಳಿಸಿ ಅಮೇರಿಕಾದ ವಿಶ್ವ ಕನ್ನಡ ಸಮ್ಮೇಳನದಲ್ಲಿ ಲೋಕಾರ್ಪಣೆಗೊಳಿಸಿ ವಿಶೇಷ ಸಾಧನೆ ಮಾಡಿದ ಮುದ್ದಣ ಪ್ರಕಾಶನದ ಗೌರವಾಧ್ಯಕ್ಷ ನಂದಳಿಕೆ ಬಾಲಚಂದ್ರರಾಯರಿಗೆ ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿಯು ''ಸಾಧಕ ಗೌರವ ಪುರಸ್ಕಾರ'' ನೀಡಿ ಗೌರವಿಸಿತು.

ಉಡುಪಿಯ ಶ್ರೀಕೃಷ್ಣ ಮಠದ ರಾಜಾಂಗಣದಲ್ಲಿ ತಾ.08-05-2015ರಂದು ನಡೆದ ಸಮಾರಂಭದಲ್ಲಿ ಅಕಾಡೆಮಿ ಸದಸ್ಯರಾದ ಶ್ರೀ ಅಂಬಾತನಯ ಮುದ್ರಾಡಿ, ಶ್ರೀ ಉದ್ಯಾವರ ಮಾಧವಾಚಾರ್ಯ, ಶ್ರೀ ಕಿಶನ್ ಹೆಗ್ಡೆ ಮೊದಲಾದ ಗಣ್ಯರ ಉಪಸ್ಥಿತಿಯಲ್ಲಿ ಶ್ರೀ ಬಾಲಚಂದ್ರ ರಾಯರಿಗೆ ನಗದು ಪುರಸ್ಕಾರ ದೊಂದಿಗೆ ಸ್ಮರಣಿಕೆ ನೀಡಿ ಪುರಸ್ಕರಿಸಲಾಯಿತು.

## ಶ್ರೀ ಸುಬ್ರಹ್ಮಣ್ಯ ಸಭಾ ಯುವಕಲಾವಿದೆಯರಿಂದ "ಗುರು ಗೋವಿಂದ" ನೃತ್ಯ ರೂಪಕ



ಶ್ರೀ ಸುಬ್ರಹ್ಮಣ್ಯ ಸಭಾದ ಯುವ ಕಲಾವಿದೆಯರ ತಂಡವು ತಾ. 26.04.2015ರಂದು ಶೃಂಗೇರಿ ಶಂಕರ ತತ್ತ್ವ ಅಭಿಯಾನದಿಂದ ನಡೆದ "ಶಂಕರ ಜಯಂತಿ" ಉತ್ಸವದಲ್ಲಿ ಕದ್ರಿ ನೃತ್ಯ ವಿದ್ಯಾನಿಲಯದ ನಿರ್ದೇಶಕರಾದ ವಿದ್ವಾನ್ ಶ್ರೀ ಯು. ಕೆ. ಪ್ರವೀಣ್ ಹಾಗೂ ಶ್ರೀಮತಿ ಉಷಾ ಪ್ರವೀಣ್‌ರವರ ನಿರ್ದೇಶನದಲ್ಲಿ "ಗುರು ಗೋವಿಂದಂ" ಎಂಬ ನೃತ್ಯ ರೂಪಕವನ್ನು ಪ್ರದರ್ಶಿಸಿದರು. ಮಹಿಳಾ ವೇದಿಕೆಯ ಶ್ರೀಮತಿ ಶೈಲಜಾ ಶ್ರೀಕಾಂತ್ ಮತ್ತು ಶ್ರೀಮತಿ ಅರುಣಾ ಸೋಮಶೇಖರ್ ಕಾರ್ಯಕ್ರಮ ಸಂಯೋಜಿಸಿದರು.

## "ಶ್ರೀರಂಗ" ಪ್ರಾರಂಭೋತ್ಸವ



ಉಡುಪಿಯ ಭಾರತ್ ಬಿಲ್ಡರ್ಸ್ ಅವರಿಂದ ಉಡುಪಿ ಒಳಕಾಡಿನಲ್ಲಿ ನಿರ್ಮಿಸಲಾದ ಅತ್ಯಾಧುನಿಕ ಸೌಲಭ್ಯಗಳಿಂದ ಕೂಡಿದ ನೂತನ ವಸತಿ ಸಮುಚ್ಚಯ "ಶ್ರೀರಂಗ"ದ ಪ್ರಾರಂಭೋತ್ಸವವು ದಿನಾಂಕ 24-04-2015 ರಂದು ಗಣ್ಯರ ಉಪಸ್ಥಿತಿಯಲ್ಲಿ ನೆರವೇರಿತು.



## ವೈದಿಕ ಶಿಬಿರ ಸಮಾರೋಪ

ಬೆಳ್ತಂಗಡಿಯ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ ವತಿಯಿಂದ ಲ್ಯಾಲ ಸುಬ್ರಹ್ಮಣ್ಯ ಸಭಾಭವನದಲ್ಲಿ ಏಪ್ರಿಲ್ 18ರಿಂದ ಪ್ರಾರಂಭಗೊಂಡ 7 ದಿನಗಳ ಮಕ್ಕಳ ವೈದಿಕ ಶಿಬಿರವು ತಾ.25ರಂದು ಸಮಾಪನೆಗೊಂಡಿತು. ಶಿಬಿರದಲ್ಲಿ ಒಟ್ಟು 26 ವಿದ್ಯಾರ್ಥಿಗಳು ಭಾಗವಹಿಸಿದ್ದು ವಿದ್ಯಾರ್ಥಿಗಳಿಗೆ ಸಂಕ್ಷಿಪ್ತ ನಿತ್ಯಪೂಜಾ ಪದ್ಧತಿ, ಸಂಧ್ಯಾವಂದನೆ, ರುದ್ರಪಠಣ, ಬೌದ್ಧಿಕ ನೀತಿ ಕತೆಗಳು, ಅಥರ್ವ ಸೂಕ್ತ ಮೊದಲಾದವುಗಳನ್ನು ಬೋಧಿಸಲಾಯಿತು. ಪ್ರತಿದಿನ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳನ್ನು ನಡೆಸಲಾಯಿತು. ಸಮಾರೋಪ ಸಮಾರಂಭದಲ್ಲಿ ಶಿಬಿರಾರ್ಥಿಗಳು ಗುರುಕಾಣಿಕೆ ಸಮರ್ಪಿಸಿದರು. ಉಪನ್ಯಾಸಕ ಡಾ| ಶ್ರೀಧರ ಭಟ್, ಜಗನ್ನಿವಾಸ ರಾವ್, ಬಿ.ಕೆ.ಧನಂಜಯ ರಾವ್, ಶ್ರೀಪತಿ ರಾವ್, ಮೊದಲಾದವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ನುಡಿಮುತ್ತುಗಳ ಕೈಪಿಡಿಯನ್ನು ಬಿಡುಗಡೆ ಗೊಳಿಸಲಾಯಿತು.

## ಡಾ| ದಯಾನಂದ ಎಸ್. ರಾವ್ ಟ್ರಸ್ಟ್ ವತಿಯಿಂದ ಸಾಲ ವಿದ್ಯಾರ್ಥಿ ವೇತನಕ್ಕೆ ಕೊಡುಗೆ

**ಡಾ| ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು ''ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ''ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ಪ್ರತೀ ವರ್ಷದಂತೆ ಈ ವರ್ಷವೂ ರೂ.2,00,001 ನಗದು ಹಣವನ್ನು ಒದಗಿಸಿದ್ದಾರೆ.**

ಈ ವಿದ್ಯಾರ್ಥಿ ವೇತನ ನಿಧಿಗೆ ದೇಣಿಗೆಯನ್ನು ಒದಗಿಸಲು ಕಾರಣರಾದ ಟ್ರಸ್ಟ್‌ಮತ್ತು ಅದರ ಅಧ್ಯಕ್ಷರಾದ ಶ್ರೀಮತಿ ಮೋಹಿನಿ ಡಿ.ರಾವ್ ಇವರಿಗೆ ಸಂಘವು ಕೃತಜ್ಞತೆಯನ್ನು ಅರ್ಪಿಸುತ್ತದೆ. ಈ ಮೊಬಲಗನ್ನು ಪ್ರತಿ ವರ್ಷದಂತೆ ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ಅರ್ಹ ವಿದ್ಯಾರ್ಥಿಗಳಿಗೆ ನೀಡಲಾಗುವುದು. ಈ ಬಗ್ಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಣೆಯನ್ನು ಆಸಕ್ತರು ವೀಕ್ಷಿಸಬಹುದು.

**-ಕಾರ್ಯದರ್ಶಿ**

## ಬೊಕ್ಕಸ ಚಂದ್ರಶೇಖರ್ ರಾವ್‌ರವರಿಗೆ ಸನ್ಮಾನ



ಕರ್ನಾಟಕ ಬ್ಯಾಂಕ್‌ನ ಉಪ ಮಹಾಪ್ರಬಂಧಕರಾಗಿದ್ದ ಚಂದ್ರಶೇಖರ ರಾವ್ ಬಿ. ಅವರು ಮಹಾಪ್ರಬಂಧಕರಾಗಿ ಪದೋನ್ನತಿಗೊಂಡಿದ್ದಾರೆ. ವಾಣಿಜ್ಯ ಶಾಸ್ತ್ರದಲ್ಲಿ ಪದವಿ ಹೊಂದಿರುವ ಚಂದ್ರಶೇಖರ ರಾವ್ ಬಿ. ಅವರು ಅಸೋಸಿಯೇಟ್ ಚಾರ್ಟರ್ಡ್ ಅಕೌಂಟೆಂಟ್ ಹಾಗೂ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಬ್ಯಾಂಕಿಂಗ್ ಆ್ಯಂಡ್ ಫೈನಾನ್ಸ್‌ನಲ್ಲಿ ಸರ್ಟಿಫೈಡ್ ಅಸೋಸಿಯೇಟ್ ಆಗಿದ್ದಾರೆ.

ಮೂಲತಃ ಮೂಡಬಿದಿರೆಯ ಅಲಂಗಾರ್ ನಿವಾಸಿಯಾಗಿರುವ ಅವರು 1995ರಲ್ಲಿ ಬ್ಯಾಂಕ್ ಕ್ಷೇತ್ರದಲ್ಲಿ ಪ್ರಬಂಧಕಾರಿ ಸೇವೆ ಪ್ರಾರಂಭಿಸಿ, ಹಲವು ಶಾಖೆಗಳಲ್ಲಿ ವಿವಿಧ ಹುದ್ದೆಗಳಲ್ಲಿ ಸುಮಾರು 20 ವರ್ಷಗಳ ಕಾಲ ಕಾರ್ಯ ನಿರ್ವಹಿಸಿದ್ದಾರೆ. ಇವರನ್ನು "ಶಂಕರ ಜಯಂತಿ" ಕಾರ್ಯಕ್ರಮದಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾ ವತಿಯಿಂದ ಸನ್ಮಾನಿಸಲಾಯಿತು. ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಸಿ. ಎಸ್. ರಾವ್, ಉಪಾಧ್ಯಕ್ಷರಾದ ಶ್ರೀ ಎಂ.ಆರ್.ವಾಸುದೇವ, ಡಾ| ಎ.ಪಿ.ಕೃಷ್ಣ, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಉಪಸ್ಥಿತರಿದ್ದರು.



**ಉಡುಪಿಯ ಎಸ್.ಎಮ್.ಎಸ್.ಪಿ. ಸಂಸ್ಕೃತ ಮಹಾವಿದ್ಯಾಲಯದಲ್ಲಿ ಕವಿ, ನಿವೃತ್ತ ಪ್ರಾಧ್ಯಾಪಕರೂ ಆದ ಶ್ರೀ ಮ.ನಾ.ಹೆಬ್ಬಾರ್ ಇವರನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ| ಎಚ್.ಕೆ.ಸುರೇಶ್ ಆಚಾರ್ಯರು ಶಾಲು ಹಾರದೊಂದಿಗೆ ಸನ್ಮಾನಿಸಿದರು.**



RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

# ವೈದ್ಯಕೀಯ ವೇದಿಕೆ–ಆರೋಗ್ಯ ಮಾಹಿತಿ

ಡಾ। ವೈ. ಸುದರ್ಶನ ರಾವ್



## ಪ್ರಶ್ನೆ: ವೃದ್ಧಾಪ್ಯ ಹಾಗೂ ಆರೋಗ್ಯ

ಭ್ರೂಣಾವಸ್ಥೆಯಿಂದ ಹಿಡಿದು ಪ್ರೌಢಾವಸ್ಥೆಯನ್ನು ತಲುಪುವ ತನಕ ಗಾತ್ರದಲ್ಲಿ ದೊಡ್ಡದಾಗಿ ಬೆಳೆಯುವುದನ್ನು ಬೆಳವಣಿಗೆ ಎಂದು ಕರೆಯುತ್ತೇವೆ. ಹೀಗೆ ಗಾತ್ರದಲ್ಲಿ ದೊಡ್ಡದಾಗಿ ಬೆಳೆಯುವ ಈ ಬೆಳವಣಿಗೆಗೆ ನಮ್ಮ ದೇಹದ ಜೀವಕೋಶಗಳು ಪದೇ ಪದೇ ವಿಭಜನೆಗೊಳ್ಳುವುದೇ ಕಾರಣ (ಇದು ಪದೇ ಪದೇ ಹೇಳುತ್ತಿರುವ ವಿಷಯವಾಗಿದ್ದರೂ ವಿಷಯಕ್ಕೆ ಸಂಬಂಧಿಸಿದಂತೆ ಹೊಸ ಮಾಹಿತಿಗಳ ಸೇರ್ಪಡೆ ಇರುವುದನ್ನು ಗಮನಿಸಬೇಕು). ಅದೇ ರೀತಿ ಗಾಯ ಮಾಸಿ ಗುಣವಾಗುವುದೂ, ಖಾಯಿಲೆಯಿಂದಾಗಿಯೋ ಅಥವಾ ಉಪಯೋಗಿಸಿ ಸವೆದ ಭಾಗಗಳ ಜಾಗದಲ್ಲಿ ಪುನಃ ಹೊಸ ಜೀವಕೋಶಗಳು ತುಂಬಿಕೊಳ್ಳುವುದೂ ಜೀವಕೋಶಗಳು ವಿಭಜನೆಯಾಗುವುದರ ಮೂಲಕವೇ. ಹಾಗೆಯೇ, ಈಗ ಇರುವ ಜೀವಕೋಶದೊಳಗೆ ಹಲವಾರು ಕಶ್ಮಲಗಳು ಶೇಖರವಾಗುತ್ತಾ ಬಂದಂತೆ ಆ ಕಶ್ಮಲಗಳ ಪರಿಣಾಮದಿಂದಾಗಿ ಪ್ರತಿಯೊಂದು ಜೀವಕೋಶವು ಸಾಯುತ್ತದೆ. ಹೀಗೆ ಸತ್ತ ಜೀವಕೋಶಗಳ ಸ್ಥಾನಭರ್ತಿಯಾಗುವುದು ಕೂಡಾ ಹಳೆಯ ಜೀವಕೋಶಗಳು ವಿಭಜನೆಯಾಗಿ ಹೊಸಕೋಶವನ್ನು ಹುಟ್ಟಿಸುವುದರ ಮೂಲಕವೇ. ಇದು ನಮ್ಮ ದೇಹವು ತಾನು ಇದ್ದ ಸ್ಥಿತಿ(ಆರೋಗ್ಯವನ್ನು)ಯನ್ನು ಕಾಪಾಡಿಕೊಳ್ಳುವ ವಿಧಾನ. ಪ್ರತಿಯೊಂದು ಜೀವಕೋಶವು ವಿಭಜನೆಯಾಗುವಾಗ ತನ್ನಂತೆಯೇ ಇರುವ ಇನ್ನೊಂದು ಜೀವಕೋಶವನ್ನು ಸೃಷ್ಟಿಸುತ್ತವೆ. ಈ ಜೀವಕೋಶದ ಮೂಲಪ್ರತಿ (template) ಜೀವಕೋಶದ ಕೇಂದ್ರವಾದ ನ್ಯೂಕ್ಲಿಯಸ್ ಎಂಬ ಭಾಗದಲ್ಲಿರುವ ಜೀನ್ (gene) ನಲ್ಲಿದೆ. ಜೀವಕೋಶವೊಂದರ ಜೀನ್ ಹೊಸ ಜೀವಕೋಶವನ್ನು ಸೃಷ್ಟಿಸುವಾಗ ಅದಕ್ಕೂ ತನ್ನಂತಹದೇ ಜೀನ್‌ನ ಮೂಲ ಪ್ರತಿಯ ಪ್ರತಿಯನ್ನು ತಯಾರಿಸಿ ಕೊಡುತ್ತದೆ. ಮುಂದೆ ಈ ಹೊಸ ಜೀವಕೋಶವು ತಾನು ಇನ್ನೊಂದು ಜೀವಕೋಶಕ್ಕೆ ಜನ್ಮಕೊಡುವಾಗ ಈ ಮೂಲಪ್ರತಿಯ ಪ್ರತಿಯನ್ನು ಬಳಸಿ ಹೊಸ ಜೀವಕೋಶವನ್ನು ಸೃಷ್ಟಿಸಿಕೊಡುತ್ತದೆ ಹಾಗೂ ಅದಕ್ಕೂ ತನ್ನ "ಮೂಲ ಪ್ರತಿಯ ಪ್ರತಿಯ ಪ್ರತಿಯನ್ನು" ಕೊಡುತ್ತದೆ. ಈ ಪ್ರತಿ ಮಾಡುವ ಪ್ರಕ್ರಿಯೆ ಪ್ರತೀ ವಿಭಜನೆಯಲ್ಲೂ ಮುಂದುವರೆಯುತ್ತದೆ. ಈ ಪ್ರಕ್ರಿಯೆಯನ್ನು ಮೂಲಪ್ರತಿಯ xerox ತೆಗೆದು ನಂತರ ಪ್ರತೀಬಾರಿಯೂ ತೆಗೆದ ಪ್ರತಿಯಿಂದಲೇ ಹೊಸ ಪ್ರತಿಗಳನ್ನು ತೆಗೆಯುವುದಕ್ಕೆ ಹೋಲಿಸಬಹುದು. ಹೀಗೆ ಸುಮಾರು ಐವತ್ತು ಬಾರಿ ಪ್ರತಿಯಿಂದ ಪ್ರತಿಗಳನ್ನು ತೆಗೆದರೆ, ಕೊನೆಯ ಪ್ರತಿಗೂ ಮೂಲಪ್ರತಿಗೂ ಹೋಲಿಕೆ ಇರುವುದಿಲ್ಲ, ಮಾತ್ರವಲ್ಲ ಮೂಲ ಪ್ರತಿಯಲ್ಲಿದ್ದ ಮಾಹಿತಿಗಳೆಷ್ಟೋ ಕೊನೆಯ ಪ್ರತಿಯಲ್ಲಿ ಇಲ್ಲದೇ ಇರಬಹುದು. ಹೀಗೆಯೇ, ಜೀವಕೋಶಗಳು ಪ್ರತೀಬಾರಿಯೂ ಪ್ರತಿ ತೆಗೆಯುವಾಗ ಮೂಲಪ್ರತಿಯ ಮಾಹಿತಿಯನ್ನು ಸ್ವಲ್ಪ ಸ್ವಲ್ಪವೇ ಕಳೆದುಕೊಳ್ಳುತ್ತಾ ಬಂದು ಕೊನೆಯ ಪ್ರತಿಯು ಸತ್ವ ಹೀನವಾಗಿರುವುದು ಮಾತ್ರವಲ್ಲ ಅದರಿಂದ ಹೊಸಪ್ರತಿಯನ್ನು ಕೂಡಾ ತೆಗೆಯಲಾಗದ ಸ್ಥಿತಿಗೆ ಬಂದಿರುತ್ತವೆ. ಈ ಕೊನೆಯ ಜೀವಕೋಶವೂ ಸತ್ತ ಮೇಲೆ ಅಲ್ಲಿ ಅದರ ಜಾಗ ತುಂಬಲು ಹೊಸ ಜೀವಕೋಶ ಇರುವುದಿಲ್ಲ. ಹೀಗೆ ದೇಹದ ಅಂಗ ಅಂಗಗಳಲ್ಲಿ ಮೂಲಪ್ರತಿಯ ಮಾಹಿತಿಯನ್ನು ಕಳೆದುಕೊಂಡಿರುವ ಹಾಗೂ ಹೊಸ ಜೀವಕೋಶಗಳನ್ನು ಹುಟ್ಟಿಸಲಾಗದ ಹಳೆಯ ಹಾಗೂ ಸತ್ವಹೀನ ಜೀವಕೋಶಗಳೇ ಉಳಿದುಕೊಂಡಾಗ ಬರುವುದೇ ವೃದ್ಧಾಪ್ಯ. ಹೊಸ ಜೀವಕೋಶಗಳು ಹುಟ್ಟದೇ ಇದ್ದರೆ ಮುಂದೆ ಬರಲಿರುವುದೇ ಮರಣ.

ನೆರಿಗೆ ಬಿದ್ದ ಶುಷ್ಕ ಚರ್ಮ, ಬೆಳ್ಳಗಾದ ಕೂದಲುಗಳು, ಬಕ್ಕತಲೆ, ಬೊಕ್ಕಬಾಯಿ, ಬಾಗಿದ ಬೆನ್ನು, ಜೋತುಬಿದ್ದ ಮಾಂಸಖಂಡಗಳು, ಮಂದವಾದ ದೃಷ್ಟಿ ಹಾಗೂ ಶ್ರವಣ, ನಡುಗುವ ಧ್ವನಿ ಹಾಗೂ ನಡಿಗೆ, ಮರೆವು, ನಿಶ್ಶಕ್ತಿ, ಕುಗ್ಗಿದ ಆತ್ಮವಿಶ್ವಾಸ ಇವೆಲ್ಲಾ ವೃದ್ಧಾಪ್ಯದ ಚಿಹ್ನೆಗಳು.


ವೃದ್ಧಾಪ್ಯ ನಿಧಾನವಾದ ಪ್ರಕ್ರಿಯೆ. ವಯಸ್ಸಾಗುವುದೇ ವೃದ್ಧಾಪ್ಯದ ಅತೀಮುಖ್ಯ ಕಾರಣವೆನ್ನಬಹುದೇ ಹೊರತು ವಯಸ್ಸಾಗಿರುವುದನ್ನೇ ವೃದ್ಧಾಪ್ಯವೆನ್ನಲಾಗದು. ಕೆಲವರಲ್ಲಿ ವೃದ್ಧಾಪ್ಯ ಸ್ವಲ್ಪ ಬೇಗನೆ ಬರಬಹುದು, ಇನ್ನು ಕೆಲವರಲ್ಲಿ ನಿಧಾನವಾಗಿ ಗೋಚರಿಸಬಹುದು. ನಮ್ಮ ಜೀವಕೋಶಗಳೊಳಗಿರುವ ಜೀನ್‌ಗಳ ರಚನೆಯು ಎಷ್ಟು ಗಟ್ಟಿಮುಟ್ಟಾಗಿದೆ ಎಂಬುದನ್ನು ಹೊಂದಿಕೊಂಡು ನಮ್ಮನ್ನು ವೃದ್ಧಾಪ್ಯ ಆವರಿಸಬಹುದಾದ ಸಮಯ ಹಾಗೂ ನಮ್ಮ ಆಯುಷ್ಯ ಇರುತ್ತದೆ. ನಾವು ಸೇವಿಸುವ ಆಹಾರ, ವಾತಾವರಣದಲ್ಲಿರುವ ಕಲ್ಮಶಗಳು, ವಿಕಿರಣಗಳ ಪ್ರಭಾವ, ಮದ್ಯಪಾನ, ಧೂಮಪಾನ, ನರಳುತ್ತಿರುವ ಖಾಯಿಲೆಗಳು, ಮಾನಸಿಕ ಒತ್ತಡ ಇವೆಲ್ಲವೂ ನಾವು ವೃದ್ಧರಾಗುವ ಸಮಯವನ್ನು ನಿರ್ಧರಿಸುತ್ತವೆ.

ಒಂದು ವೇಳೆ ನಾವು ಯಾವುದೇ ಅಫಘಾತ ಅಥವಾ ಖಾಯಿಲೆಗೆ ತುತ್ತಾಗದೇ ಇದ್ದರೆ ನಾವು ಜೀವಿಸಬಹುದಾದ ಅಂದಾಜು ವಯಸ್ಸು ಅಂದರೆ ಒಬ್ಬ ವ್ಯಕ್ತಿ ಸಾಯುವ ಅಂದಾಜು ಪ್ರಾಯವು ನಾವು ಭ್ರೂಣಾವಸ್ಥೆಯಲ್ಲಿರುವಾಗಲೇ, ಅದರ ಜೀವಕೋಶಗಳ ಜೀನ್‌ನಲ್ಲೇ ನಿಗದಿಯಾಗಿರುವುದು ಈಗ ಅಚ್ಚರಿಯ ವಿಷಯವಾಗಿ ಉಳಿದಿಲ್ಲ . ಇದನ್ನು programmed death ಎಂದು ಕರೆಯುತ್ತೇವೆ. ಇನ್ನೊಂದು ಗಮನಿಸಬೇಕಾದ ಅಂಶವೆಂದರೆ ಸಣ್ಣ ಪ್ರಾಯದ ತಾಯಂದಿರಿಗೆ ಹುಟ್ಟಿದ ಮಕ್ಕಳ ಆಯುಷ್ಯವು ವಯಸ್ಸಾದ ತಾಯಂದಿರಿಗೆ ಹುಟ್ಟಿದ ಮಕ್ಕಳಿಗಿಂತ ಹೆಚ್ಚಾಗಿರುವುದು. (ಈ ಅಂಶದಲ್ಲಿ ಅಫಘಾತ ಮತ್ತು ಖಾಯಿಲೆಗಳಿಂದ ಅಪಮೃತ್ಯುಗೊಳಗಾದವರನ್ನು ಹೊರತಾಗಿರಿಸಿ ಕೇವಲ ವೃದ್ಧಾಪ್ಯದಿಂದ ಸತ್ತವರನ್ನು ಮಾತ್ರ ಪರಿಗಣನೆಗೆ ತೆಗೆದುಕೊಳ್ಳಬೇಕು)

ಅಲ್ಜೀಮರನ ಖಾಯಿಲೆ (ಮೆದುಳಿನ ಜೀವಕೋಶಗಳು ನಶಿಸಿ ಮಕ್ಕಳಂತೆ ವರ್ತಿಸುವುದು), ದುಗುಡ ದುಮ್ಮಾನಗಳಂತಹಾ ಅನೇಕ ಮಾನಸಿಕ ಖಾಯಿಲೆಗಳು, ಕೀಲುನೋವು ಹಾಗೂ ಕೀಲು ಸವೆತ, ಅಧಿಕ ರಕ್ತದೊತ್ತಡ, ಅನೇಕ ಹೃದಯದ ಖಾಯಿಲೆಗಳು, ಪಾರ್ಶ್ವವಾಯು, ಗ್ಯಾಂಗ್ರಿನ್, ಕ್ಯಾನ್ಸರ್, ಸಕ್ಕರೆಖಾಯಿಲೆ, ಕಿಡ್ನಿಯ ವೈಫಲ್ಯ, ಉಬ್ಬಸ, ಬೊಜ್ಜು, ಪ್ರಾಸ್ಟೇಟ್ ಗ್ರಂಥಿಯು ದೊಡ್ಡದಾಗುವುದು,ವಿಟಮಿನ್ ಕೊರತೆ,ಎಲುಬಿನಲ್ಲಿ ಕ್ಯಾಲ್ಸಿಯಂ ಕಡಿಮೆಯಾಗಿ ಬೇಗನೆ ಮುರಿಯುವುದು, ಮೀಣಿಜೀವಿಗಳ ಬಾಧೆ, ಕಣ್ಣಿನಲ್ಲಿ ಪೊರೆ ಬರುವುದು, ದೃಷ್ಟಿಮಂದವಾಗುವುದು,ಚರ್ಮದ ಕಾಯಿಲೆಗಳು, ತೊನ್ನು, ಸದಾಕಾಲ ಮಗ್ಗುಲು ಬದಲಾಯಿಸದೇ ಮಲಗಿರುವುದರಿಂದ ಹಾಸಿಗೆಯ ಒತ್ತಡ ಬೀಳುವಲ್ಲಿ ಆಗುವ ವ್ರಣ (bed sores), ಬಿದ್ದು ಗಾಯವಾಗುವುದು, ಅಫಘಾತಗಳು ಇವೆಲ್ಲಾ ವಯಸ್ಸಾದಂತೆ ಹಣುಕುಹಾಕುವ ಖಾಯಿಲೆಗಳ ಪಟ್ಟಿಯಲ್ಲಿ ಬರುವ ಹಲವು ಖಾಯಿಲೆಗಳು. ಈ ಖಾಯಿಲೆಗಳು ಬರಲು ವಯಸ್ಸಾದಂತೆ ಜೀವಕೋಶ ಗಳಲ್ಲಾಗುವ ಬದಲಾವಣೆಗಳು ಒಂದು ಕಾರಣವಾದುದರಿಂದ ಈ ಖಾಯಿಲೆಗಳು ವೃದ್ಧರಲ್ಲಿ ಸಾಮಾನ್ಯವಾಗಿವೇ ಹೊರತು ಇವು ಕೇವಲ ವೃದ್ಧರಿಗೆ ಮಾತ್ರ ಬರುವ ಖಾಯಿಲೆಗಳಲ್ಲ.

ಆರೋಗ್ಯರಕ್ಷಣೆಯ ಸೌಕರ್ಯಗಳು ಅಭಿವೃದ್ಧಿಹೊಂದಿದ ಹಾಗೆ ಮನುಷ್ಯನು ಬದುಕುವ ಸರಾಸರಿ ಆಯುಷ್ಯ ಒಂದು ಕಾಲದಲ್ಲಿ ೩೦ರ ಆಸುಪಾಸಿನಲ್ಲಿದ್ದದ್ದು (!) ಈಗ ೭೦ರ ಗಡಿ ತಲುಪುತ್ತಾ ಇದೆ. ಹಾಗಾಗಿ ಪ್ರಪಂಚದಾದ್ಯಂತ ವೃದ್ಧರ ಸಂಖ್ಯೆ ಏರುತ್ತಾ ಇದೆ. ಹಾಗಾಗಿ ವೃದ್ಧಾಪ್ಯದ ಸಮಸ್ಯೆಗಳಿಗೆ ಏನು, ಯಾಕೆ, ಎಂತು ಎಂದು ಪರಿಹಾರ ನೀಡಲು ಸನ್ನದ್ಧರಾಗಿರುವ ಅನಿವಾರ್ಯತೆ ಈ ಶತಮಾನದಲ್ಲಿ ಬರಲಿದೆ.

ವೃದ್ಧಾಪ್ಯದ ಕೀಲಿಕೈ ಇರುವ ಜೀನ್ ಗಳ ಮೇಲೆ ನಮಗೇನು ಹಿಡಿತವಿಲ್ಲವಾದರೂ, ಸಮತೂಕದ ಪೌಷ್ಟಿಕಆಹಾರ, ನಿರ್ಮಲ ವಾತಾವರಣದಲ್ಲಿನ ಬದುಕು, ನಿಯಮಿತವಾದ ವ್ಯಾಯಾಮ, ಧ್ಯಾನ, ಶಿಸ್ತುಬದ್ಧ ದಿನಚರಿ, ನಿಶ್ಚಿಂತ ಹಾಗೂ ನಿರಾಳ ಮನಸ್ಸು ಬರಲಿರುವ ವೃದ್ಧಾಪ್ಯವನ್ನು ಮುಂದೆ ಹಾಕುವುದು ಮಾತ್ರವಲ್ಲ ಪೂರ್ಣಾಯುಷ್ಯವನ್ನೂ ನೀಡುತ್ತದೆಂಬುದಕ್ಕೆ ಎರಡು ಮಾತಿಲ್ಲ.



ಡಾ। ವೈ.ಸುದರ್ಶನ್ ರಾವ್‌ರವರು ನಮ್ಮ ಪತ್ರಿಕೆಯ ಈ ಅಂಕಣದಲ್ಲಿ ಬರೆದಿರುವ ಲೇಖನಗಳನ್ನು, ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ ಸಂಕಲಿಸಿ ''ಇದಂ ಶರೀರಂ'' ಎಂಬ ಹೆಸರಿನ ಪುಸ್ತಕ ರೂಪದಲ್ಲಿ ಪ್ರಕಟಿಸಿದೆ. ಆಸಕ್ತರು ಇದರ ಪ್ರತಿಯನ್ನು ಕೆನರಾ ಹೆಲ್ತ್ ಸೆಂಟರ್, ಅಂಜುಮಾನ್ ರಸ್ತೆ, ಹೊಟೇಲ್ ರುಕ್ಮಿಣಿ ಎದುರು, ಸಿಟಿಬಸ್ಟ್ಯಾಂಡ್ ಬಳಿ ಇಲ್ಲಿಂದ ಪಡೆದುಕೊಳ್ಳಬಹುದು.


ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 9845136322

## 'ಪ್ರೇಮ ಹೂಗೊಂಚಲು' ಮತ್ತು 'ಭಕ್ತಿ ಹೂಗೊಂಚಲು' ಪುಸ್ತಕಗಳ ಬಿಡುಗಡೆ




ತಾ.04–04–2015ರಂದು ಹಂಪಿನಗರದ ಗ್ರಂಥಾಲಯದಲ್ಲಿ ಭಾರತ ವಿಕಾಸ ಪರಿಷತ್ತಿನ ವೇದಿಕೆಯಲ್ಲಿ ಶ್ರೀ ಬಿ.ವಿ.ರಾವ್‌ರವರ ವಿರಚಿತ 'ಪ್ರೇಮ ಹೂಗೊಂಚಲು' ಮತ್ತು 'ಭಕ್ತಿ ಹೂಗೊಂಚಲು' ಪುಸ್ತಕಗಳ ಬಿಡುಗಡೆ ಕಾರ್ಯಕ್ರಮ ನೇರವೇರಿತು. ಪುಸ್ತಕವನ್ನು ಪ್ರೊ. ಲಲಿತಾಂಬ ಅವರು ಬಿಡುಗಡೆ ಮಾಡಿ ಪುಸ್ತಕಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಪುಸ್ತಕಗಳಲ್ಲಿರುವ ಕವನಗಳ ಮೇಲೆ ಶರತ್ ಕುಮಾರ್ ಮತ್ತು ಅವರ ತಂಡದಿಂದ ಸಂಗೀತ/ಗೀತ ನಾಟಕವು ಪ್ರದರ್ಶನಗೊಂಡು ಎಲ್ಲರನ್ನು ಮನರಂಜಿಸಿತು.

ದಾಂಪತ್ಯ ಜೀವನದ ರಜತ ಮಹೋತ್ಸವ



ಶ್ರೀಮತಿ ಸುಧಾಮಣಿ ಮತ್ತು ಶ್ರೀ ಸತ್ಯನಾರಾಯಣ ರಾವ್
ಸೀತಾ ನಿಲಯ, ಪಡುಬೆಳ್ಳೆ
ದಾಂಪತ್ಯ ಜೀವನದ 25 ವರ್ಷಗಳನ್ನು ಪೂರೈಸಿದ ನಿಮಗೆ ಭಗವಂತನು
ದೀರ್ಘಾಯುಷ್ಯ, ಆರೋಗ್ಯವನ್ನು ಕೊಟ್ಟು ಕಾಪಾಡಲೆಂದು ಹಾರೈಸುವ,
ಶ್ರೀ ಸತ್ಯಪ್ರಸಾದ್ ರಾವ್, ಪಡುಬೆಳ್ಳೆ; ಶ್ರೀ ರಾಧಾಕೃಷ್ಣರಾವ್ ಮತ್ತು ಸಹೋದರಿಯರು, ಪುತ್ತೂರು
ಶ್ರೀ ಭವಾನಿಶಂಕರ ರಾವ್, ಸಹೋದರರು ಮತ್ತು ಸಹೋದರಿ, ಪಡುಬೆಳ್ಳೆ ಮತ್ತು ಬಂಧು–ಮಿತ್ರರು

# ಉದ್ಯಾವರ-ರಸಬಾವಿ ಮಹಾಲಿಂಗೇಶ್ವರ ದೇವಳದಲ್ಲಿ ನಾಗಪ್ರತಿಷ್ಠೆ





ಉಡುಪಿ ಉದ್ಯಾವರದ ಶ್ರೀ ಸಿದ್ಧಿ ವಿನಾಯಕ ದೇವಳದ ಬಳಿಯಲ್ಲಿರುವ ಸಾರ್ವಜನಿಕ ನಾಗಬನದಲ್ಲಿ ದಿನಾಂಕ 02-05-2015ರಂದು ಶ್ರೀ ಆಶ್ಲೇಷ ಬಲಿ ಹಾಗೂ ನಾಗಪ್ರತಿಷ್ಠೆ ಕಾರ್ಯಕ್ರಮಗಳು ವಿಜೃಂಭಣೆಯಿಂದ ನೆರವೇರಿತು. ಸುಮಾರು 3500ಜನ ಭಕ್ತ ಬಾಂಧವರು ಸಮಾರಂಭದಲ್ಲಿ ಪಾಲ್ಗೊಂಡಿದ್ದು, ಅನ್ನ ಪ್ರಸಾದ ಸ್ವೀಕರಿಸಿದರು. ಉದ್ಯಾವರದವರೇ ಆದ ಶ್ರೀ ಪ್ರಫುಲ್ಲಚಂದ್ರ ರಾವ್ ಮತ್ತು ಶ್ರೀಮತಿ ಪೂರ್ಣಿಮಾ ದಂಪತಿಗಳು ಬನದಲ್ಲಿ ಕರ್ತೃಗಳಾಗಿ ಪಾಲ್ಗೊಂಡಿದ್ದು, ಸ್ಥಾನಿಕ ಮನೆತನಕ್ಕೆ ಸೇರಿದ ಈ ಪುರಾತನ ರಸಬಾವಿ ಮಹಾಲಿಂಗೇಶ್ವರ ದೇವಸ್ಥಾನದ ಜೀರ್ಣೋದ್ಧಾರದ ಕೆಲಸ ಕಾರ್ಯಗಳನ್ನು ಮುಂದಿನ ದಿನಗಳಲ್ಲಿ ಆದಷ್ಟು ಬೇಗನೆ ಕೈಗೊಳ್ಳುವಂತೆ ಪ್ರಯತ್ನಿಸ ಲಾಗುವುದೆಂದು ಅಲ್ಲಿನ ಆಡಳಿತ ಮಂಡಳಿಯು ನಿರ್ಧರಿಸಿಕೊಂಡಿದೆ.

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ

ಪ್ರತಿ ಸೋಮವಾರ: **''ಸತ್ಸಂಗದವರಿಂದ ಭಜನೆ''** ಸಂಜೆ 6-00 ಗಂಟೆಯಿಂದ

ಪ್ರತಿ ಮಂಗಳವಾರ: **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ **''ಪಾರಾಯಣ''** ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.05-06-2015) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.23-05-2015 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.04-06-2015 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

### ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿಯಾಗಿ ಶ್ರೀ ಅಲೆವೂರು ಶ್ರೀನಿವಾಸ ರಾವ್



ಇದುವರೆಗೆ ಕೊಡಗು ಜಿಲ್ಲಾ ಪಂಚಾಯತ್‌ನ ಮುಖ್ಯ ಯೋಜನಾ ಅಧಿಕಾರಿಯಾಗಿದ್ದ ಶ್ರೀ ಅಲೆವೂರು ಶ್ರೀನಿವಾಸ ರಾವ್ (ದಿ। ಅಲೆವೂರು ವೆಂಕಟರಾಯರ ಪುತ್ರ) ಇವರು ದಿನಾಂಕ 05-05-2015ರಿಂದ ಉಡುಪಿ ಜಿಲ್ಲಾ ಪಂಚಾಯತ್‌ನ ಮುಖ್ಯ ಯೋಜನಾಧಿಕಾರಿಯಾಗಿ ವರ್ಗಾವಣೆಗೊಂಡು ಅಧಿಕಾರ ಸ್ವೀಕರಿಸಿರುತ್ತಾರೆ. ಅಲ್ಲದೇ ಶ್ರೀಯುತರು ಉಡುಪಿ ಜಿಲ್ಲಾ ಪಂಚಾಯತ್‌ನಲ್ಲಿ ಉಪ ಕಾರ್ಯದರ್ಶಿ ಹುದ್ದೆಯ ಹೆಚ್ಚುವರಿ ಪ್ರಭಾರ ವನ್ನೂ ನಿರ್ವಹಿಸುತ್ತಾರೆ. ಶ್ರೀ ಶ್ರೀನಿವಾಸ ರಾಯರ ಅಧಿಕಾರದ ಅವಧಿಯಲ್ಲಿ ಜಿಲ್ಲೆಯು ಇನ್ನಷ್ಟು ಪ್ರಗತಿಯನ್ನು ಕಾಣಲಿ ಎಂದು ಶ್ರೀಶಾರದಾ ಹಾರೈಕೆ.

### ವೃಷಭ ಮಾಸದ ವಿಶೇಷ ದಿನಗಳು

| | |
|---|---|
| 15-05-2015 | ವೃಷಭ ಸಂಕ್ರಮಣ, ಪ್ರದೋಷಃ |
| 18-05-2015 | ಅಮವಾಸ್ಯಾ, |
| 25-05-2015 | ರೋಹಿಣೀ ನಕ್ಷತ್ರಾರಂಭ |
| 29-05-2015 | ಸರ್ವೈಕಾದಶೀ, |
| 31-05-2015 | ಪ್ರದೋಷಃ |
| 02-06-2015 | ಪೂರ್ಣಿಮಾ, |
| 05-06-2015 | ಸಂಕಷ್ಟ ಚತುರ್ಥಿ, ಚಂದ್ರೋದಯ ರಾತ್ರಿ-09.34ಕ್ಕೆ |
| 08-06-2015 | ಮೃಗಶಿರಾ ನಕ್ಷತ್ರಾರಂಭ |
| 12-06-2015 | ಸರ್ವೈಕಾದಶೀ |
| 14-06-2015 | ಪ್ರದೋಷಃ |
| 15-06-2015 | ಮಿಥುನ ಸಂಕ್ರಮಣ |

## ಪ್ರತಿಭಾನ್ವಿತರು


### ಚೈತ್ರಾ ರಾವ್ ಪೆರಣಂಕಿಲ



ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯು 2014ರ ಸಾಲಿನಲ್ಲಿ ನಡೆಸಿದ ಭರತನಾಟ್ಯದ ವಿದ್ವತ್ ಪರೀಕ್ಷೆಯಲ್ಲಿ ಕು।ಚೈತ್ರಾರಾವ್ ಪೆರಣಂಕಿಲ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಬೆಂಗಳೂರು ದೂರದರ್ಶನದ 'ಬಿ' ಶ್ರೇಣಿಯ ಕಲಾವಿದೆಯಾಗಿರುವ ಈಕೆ 2014ರಲ್ಲಿ ಕನ್ನಡ ಸಂಸ್ಕೃತಿ ಇಲಾಖೆಯು ನಡೆಸಿದ ಯುವ ಪ್ರತಿಭೆಯಲ್ಲಿ ಮೈಸೂರು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿರುತ್ತಾರೆ.

ಮೈಸೂರಿನ ಸರಕಾರಿ ಆಯುರ್ವೇದಿಕ್ ಕಾಲೇಜಿನಲ್ಲಿ ಬಿ.ಎ.ಎಮ್.ಎಸ್. ಅಂತಿಮ ವರ್ಷದ ವಿದ್ಯಾರ್ಥಿನಿಯಾಗಿರುವ ಕು।ಚೈತ್ರಾ ತನ್ನ ಶಾಲಾ ಜೀವನದಲ್ಲಿ ಉಡುಪಿ ಜಿಲ್ಲೆ ಮತ್ತು ರಾಜ್ಯ ಮಟ್ಟದ ಹಲವಾರು ಸ್ಪರ್ಧೆಗಳಲ್ಲಿ ಭಾಗವಹಿಸಿ ಬಾಲ ಪ್ರತಿಭೆ, ಕಿಶೋರ ಪ್ರತಿಭೆ ಸಹಿತ ಹಲವಾರು ಪ್ರಶಸ್ತಿಗಳನ್ನು ಪಡೆದಿರುತ್ತಾರೆ. ಪ್ರತಿಭಾ ಕಾರಂಜಿಯಲ್ಲಿಯೂ ರಾಜ್ಯ ಮಟ್ಟದ ಪ್ರಶಸ್ತಿ ವಿಜೇತರಾಗಿರುತ್ತಾರೆ. ಮೈಸೂರಿನ ಡಾ। ಚೇತನಾ ರಾಧಾಕೃಷ್ಣ ಇವರಲ್ಲಿ ವಿದ್ವತ್ ಪರೀಕ್ಷೆಯ ತರಬೇತಿ ಪಡೆದ ನೆಚ್ಚಿನ ಶಿಷ್ಯೆ. ಕು। ಚೈತ್ರಾ ಬಿ.ಎಸ್.ಎನ್.ಎಲ್. ಉದ್ಯೋಗಿ ಶ್ರೀಮತಿ ಆಶಾಲತಾ ಮತ್ತು ಎಸ್.ಬಿ.ಐ. ಪರ್ಕಳ ಶಾಖೆಯ ಉದ್ಯೋಗಿ ಶ್ರೀ ಶ್ರೀನಿವಾಸರಾವ್ ಪೆರಣಂಕಿಲ ಇವರ ಪುತ್ರಿ. ಕು। ಚೈತ್ರಾರ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು.

### ಕು। ಸಾಗರಿಕಾ ಎಸ್. ರಾವ್



2014 ನವಂಬರ್‌ನಲ್ಲಿ ಕರ್ನಾಟಕ ಪ್ರೌಢಶಿಕ್ಷಣ ಮಂಡಳ ನಡೆಸಿದ ಕರ್ನಾಟಕ ಶಾಸ್ತ್ರೀಯ ಸಂಗೀತ ಪ್ರಾಥಮಿಕ (ಜೂನಿಯರ್) ವಿಭಾಗದ ಪರೀಕ್ಷೆಯಲ್ಲಿ 87% ಅಂಕಗಳನ್ನು ಪಡೆದು ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದಾಳೆ. ಇವಳು ಪಡುಬೆಳ್ಳೆ ಬಿ. ಸದಾಶಿವರಾವ್ ಹಾಗೂ ಸಹನಾ ಎಸ್. ರಾವ್ ಅವರ ಪುತ್ರಿ. ಮೈಸೂರಿನ ವಿದುಷಿ ಶ್ರೀಮತಿ ಭಾಗಲಕ್ಷ್ಮೀ ಹಾಗೂ ಪುತ್ತೂರಿನ ವಿದೂಷಿ ಶ್ರೀಮತಿ ಸ್ವರ್ಣ.ಯನ್ ಭಟ್ ಅವರ ಶಿಷ್ಯೆಯಾಗಿರುವ ಈಕೆ ಪುತ್ತೂರಿನ ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆಯ 6ನೇ ತರಗತಿ ವಿದ್ಯಾರ್ಥಿನಿ. ಈಕೆಯ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

### ಕು. ಶ್ರುತಿ ರಾವ್



ಸರಕಾರಿ ಪದವಿಪೂರ್ವ ಕಾಲೇಜು ಬ್ರಹ್ಮಾವರ ಇಲ್ಲಿನ ವಿದ್ಯಾರ್ಥಿಯಾಗಿರುವ ಕು. ಶ್ರುತಿ ರಾವ್ 2014-15ನೇ ಸಾಲಿನ ಮಹಿಳಾ ಕ್ರೀಡಾಕೂಟದ ಖೋ-ಖೋ ಪಂದ್ಯಾಟ ಮತ್ತು ಗ್ರಾಮೀಣ ಕ್ರೀಡಾಕೂಟದ ಖೋ-ಖೋ ಪಂದ್ಯಾಟದಲ್ಲಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿರುತ್ತಾಳೆ. ಗ್ರಾಮೀಣ ಕ್ರೀಡಾಕೂಟದ ರಾಷ್ಟ್ರಮಟ್ಟದ ಪಂದ್ಯಾಟದಲ್ಲಿ ದ್ವಿತೀಯ ಸ್ಥಾನವನ್ನು (ರನ್ನರ್ಸ್ ಅಪ್) ಪಡೆದಿರುತ್ತಾಳೆ.

ಮಂದರ್ತಿ ಮ್ಯೆರ್‌ಕೋಮೆಯ ಶ್ರೀ ಶಿವರಾಮ ರಾವ್ ಹಾಗೂ ಶ್ರೀಮತಿ ಶಕುಂತಳಾ ದಂಪತಿಗಳ ಪುತ್ರಿಯಾದ ಕು। ಶ್ರುತಿ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

### ಮಾ। ಪ್ರಣವ್



ವೆಸ್ಟರ್ನ್ ಇನ್‌ಸ್ಟಿಟ್ಯೂಟ್ ಆಫ್ ಮಾರ್ಶಲ್ ಆರ್ಟ್ಸ್ ಮಂಗಳೂರಿನಲ್ಲಿ ಆಯೋಜಿಸಿದ ಏಳನೇ ವೆಸ್ಟರ್ನ್ ಓಪನ್ ನ್ಯಾಶನಲ್ ಲೆವೆಲ್ ಕರಾಟೆ ಚಾಂಪಿಯನ್-2014ರಲ್ಲಿ ಹತ್ತರಿಂದ ಹನ್ನೊಂದು ವರ್ಷ ವಯೋಮಿತಿಯ ಬಾಲಕರ ಕುಮಿಟೆ ವಿಭಾಗದಲ್ಲಿ ಬೆಳ್ಳಿ ಪದಕ ಹಾಗೂ ಕಟಾ ವಿಭಾಗದಲ್ಲಿ ಕಂಚಿನ ಪದಕವನ್ನೂ ಗಳಿಸಿದ ಪ್ರಣವ್ ಬಿ. ಕಾಸರಗೋಡು ಜಿಲ್ಲೆಯ ಪೆರ್ಲ ಶ್ರೀ ಸತ್ಯನಾರಾಯಣ ಶಾಲೆಯ 6ನೇ ತರಗತಿಯ ವಿದ್ಯಾರ್ಥಿ. ಕಲಿಕೆಯಲ್ಲಿ ಮುಂಚೂಣಿಯಲ್ಲಿರುವ ಈತ ಶಾಲಾ ಕಲೋತ್ಸವಗಳಲ್ಲಿ ಛದ್ಮವೇಷ, ಕನ್ನಡ-ಇಂಗ್ಲೀಷ್-ಸಂಸ್ಕೃತ ಭಾಷಣ, ಗೀತಾ ಕಂಠಪಾಠ, ಸಂಗೀತ ಸ್ಪರ್ಧೆಗಳಲ್ಲಿ ಅನೇಕ ಬಹುಮಾನಗಳನ್ನು ಪಡೆದಿರುತ್ತಾನೆ.

ಪೆರ್ಲದ ಸಿವಿಲ್ ಇಂಜಿನಿಯರ್ ಶ್ರೀ ಪ್ರಶಾಂತ ಬಜಕೂಡ್ಲು ಮತ್ತು ಶ್ರೀಮತಿ ನಾಗವೇಣಿ ದಂಪತಿಗಳ ಪುತ್ರನಾದ ಈತ ಕರಾಟೆಯನ್ನು ಸೆನ್ಸಯಿ ಪಿ.ಕೆ. ಆನಂದ್‌ರವರಿಂದ ಕಲಿಯುತ್ತಿದ್ದಾನೆ. ಈತನ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

## ವೈವಾಹಿಕ ಜೀವನದ ವಜ್ರ ಮಹೋತ್ಸವದ ಶುಭಾಶಯಗಳು



**ಶ್ರೀ ಶ್ರೀನಿವಾಸ ರಾವ್ ಮತ್ತು ಶ್ರೀಮತಿ ರಮಾ ದೇವಿ, ಅಲೆವೂರು**

ಅಕ್ಷಯ ತೃತೀಯಾ, 04–05–1955 - 21–04–2015

**ಮದುವೆಯ ಈ ಬಂಧ। ಅನುರಾಗದ ಅನುಬಂಧ। ತುಂಬಿದ ಸಪ್ತಪದಿ ತುಳಿದು ಅರುವತ್ತು ವರುಷ।**
**ಮುಂದಿನ ಜೀವನ ಬಾಳಲಿ ಜೊತೆಯಾಗಿ ನೂರು ವರುಷ।**

ದಾಂಪತ್ಯ ಜೀವನದ ಅರುವತ್ತು ಸಂವತ್ಸರಗಳ ಸಾರ್ಥಕ ಬದುಕನ್ನು ಸಾಧಿಸಿದ ತಮ್ಮ ಹಾಲು ಜೇನಿನಂತಹ ಸುಮಧುರ ಬಂಧುರವು ನಮಗೆ ಸದಾ ದಾರಿದೀಪವಾಗಲಿ ಎಂದು ಶುಭ ಹಾರೈಸುತ್ತಾ ನಿಮ್ಮ ಆಶೀರ್ವಾದ, ಮಾರ್ಗದರ್ಶನ ನಮಗೆ ಎಂದೆಂದಿಗೂ ಇರಲಿ ಎಂದು ಪ್ರಾರ್ಥಿಸಿಕೊಳ್ಳುವ

ಪುತ್ರರು ಮತ್ತು ಸೊಸೆಯಂದಿರು
ಪುತ್ರಿಯರು ಮತ್ತು ಅಳಿಯಂದಿರು.
ಮೊಮ್ಮಕ್ಕಳು ಮತ್ತು ಮರಿಮಕ್ಕಳು

## "ಅಖಾಡ" ಕೃತಿ ಬಿಡುಗಡೆ

(ಕವನ ಸಂಗ್ರಹ : ಎಂ.ಆರ್.ವಾಸುದೇವ)

ಸ್ಥಳ : ಸುಬ್ರಹ್ಮಣ ಸದನ ಸಭಾಗೃಹ ಮಂಗಳೂರು
ದಿನಾಂಕ : 23–05–2015.

10.30ರಿಂದ ಗೀತ ಗಾಯನ

11:30ರಿಂದ ಸಭಾ ಕಾರ್ಯಕ್ರಮ

| | |
|---|---|
| ಅಧ್ಯಕ್ಷತೆ ಹಾಗೂ ಕೃತಿ ಬಿಡುಗಡೆ | : **ಪದ್ಮ ವಿಭೂಷಣ ಡಾ। ರಾಜರ್ಷಿ ವೀರೇಂದ್ರ ಹೆಗ್ಗೆಡೆಯವರು** |
| ಕೃತಿಯ ಕುರಿತು | : **ಶ್ರೀ ಈಶ್ವರಯ್ಯ ಮಣಿಪಾಲ** |
| ಮುಖ್ಯ ಅತಿಥಿಗಳು | : **ಡಾ॥ ವಸಂತ ಕುಮಾರ ಪೆರ್ಲ**, ಆಕಾಶವಾಣಿ, ಮಂಗಳೂರು<br>**ಎಂ. ಆರ್. ಸತ್ಯನಾರಾಯಣ**, ಶಿವಮೊಗ್ಗ |
| ಉಪಸ್ಥಿತಿ | : **ಆರ್. ಗೋಪಾಲಕೃಷ್ಣ**, ಬೆಂಗಳೂರು<br>**ಶ್ರೀ ಹರಿಕೃಷ್ಣ ಪುನರೂರು** |

ಪ್ರೀತಿಯಿಂದ ಬನ್ನಿ....

ಎಂ. ಆರ್ . ವಾಸುದೇವ
ಮಾಜಿ ವಿಮಾನ ನಿಲ್ದಾಣ ನಿರ್ದೇಶಕರು, ಮಂಗಳೂರು




ತಂತ್ರಾಡಿ ವಿಶ್ವನಾಥ ಶಾನುಭೋಗ್
94487 24161
97417 85551

### ಹರಿಕೃಷ್ಣ ಡಿಜಿಟಲ್ಸ್

ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ – 576 102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

*Krishna Rao*
Ph : 2520652
Mob. : 9902029048

### KISHAN
Studio & Video
Indoor Photography & Port Folio Photography,
Video & Mixing, Lamination
MAIN ROAD, MAJOOR & BANTAKAL.

### ಶ್ರೀ ಮಾತಾ ಜ್ಯೋತಿಷ್ಯಾಲಯ

ಶ್ರೀ ಸುಬ್ರಹ್ಮಣ್ಯ ಕ್ಷೇತ್ರ, ಚೌಳಿಕೆರೆ, ಬಾರ್ಕೂರು.

ಬಾರ್ಕೂರು ಸಂಸ್ಥಾನದ ಪಾರಂಪರ್ಯ ನಾಗಬ್ರಹ್ಮ ಹಾಗೂ ದುರ್ಗೆಯ ದರ್ಶನ ಪಾತ್ರಿಗಳು, ಜೋತಿಷ್ಯರು ಮತ್ತು ಪುರೋಹಿತರು ಅಷ್ಟ ಮಂಗಲ ಪ್ರಶ್ನೆ, ಆರೂಢರಾಶಿ ಪ್ರಶ್ನೆ, ಜಾತಕ, ನಾಗದರ್ಶನ ಮತ್ತು ಸರ್ಪಸಂಸ್ಕಾರ, ಆಶ್ಲೇಷಬಲಿ, ಪ್ರತಿಷ್ಠೆ, ಶಾಂತಿ ಹಾಗೂ ಶುಭ ಕರ್ಮಗಳಿಗೆ ಅಗತ್ಯವಿದ್ದಲ್ಲಿ ವಿಚಾರಿಸಿ.

**ಶ್ರೀ ರಾಘವೇಂದ್ರ ಭಟ್ (ಫೋನ್ : 9632302234.)**

### ಶ್ರೀ ವೈಷ್ಣವಿ ಜ್ಯೋತಿಷ್ಯಾಲಯ

ನಮ್ಮಲ್ಲಿ ಜಾತಕಗಳನ್ನು ಮಾಡಿ ಕೊಡಲಾಗುವುದು.
ಹಾಗೂ ತತ್ಸಂಬಂಧ ಶಾಂತಿ ಹೋಮಾದಿಗಳನ್ನು ಮತ್ತು ಶುಭ ಕಾರ್ಯಕ್ರಮಗಳನ್ನು ನಮ್ಮಲ್ಲಿಯೇ ವ್ಯವಸ್ಥಿತವಾಗಿ ಮಾಡಿಕೊಡಲಾಗುವುದು.

**ವೇದಮೂರ್ತಿ ಚಿದಾನಂದ ಭಟ್**

#1437, 5ನೇ ಮುಖ್ಯ ರಸ್ತೆ, 2ನೇ "ಡಿ" ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560010
ಶ್ರೀ ಅಗಸ್ತ್ಯೇಶ್ವರ ದೇವಸ್ಥಾನದ ಬಳಿ, ಕಿರಿಮಂಜೇಶ್ವರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ
ಮೊಬೈಲ್– 9886629697, 9986119865

ಪ್ರೊ : ಸುಧಾಕರ್ ರಾವ್ ಬೆಳ್ಳೆ

### ಶ್ರೀಮಾತಾ ಇಲೆಕ್ಟ್ರಾನಿಕ್ಸ್

ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳಿಗಾಗಿ
ಭೇಟಿ ನೀಡಿ....

ಪ್ರೀತಿ ಕಾಂಪ್ಲೆಕ್ಸ್, ಬೆಳ್ಮಣ್ಣು, ಉಡುಪಿ. ಫೋನ್ : 08258–274103
ಚೈತ್ರ ಕಾಂಪ್ಲೆಕ್ಸ್, ಪಡುಬಿದ್ರಿ, ಗ್ರಾಮಪಂಚಾಯತ್‌ನ ಎದುರು. ಫೋನ್ : 0820–2599093

### ದೇವಿಕೃಪಾ ಏಜೆನ್ಸೀಸ್, ನಂದಿಕೂರು

ಫೋನ್ : 2556536 (R), 2555466 (O), Mobile : 9845149521

**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ। ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು



ಎಮ್. ದೇವಾನಂದ್ ಭಟ್
Cell : 9845644556
9483913344

### ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ–574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು – 574 164 (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

**Buying and selling shares as easy as checking your emails**

**Sharekhan Online Trading Account Features:**
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)


Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Krishnakumar Rao Mattu, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@yahoo.co.in Website : www.srisharada.org